ಟೋನಿ ಅಲಾಮೊ ಕ್ರೈಸ್ತ ಮಿನಿಸ್ಟ್ರಿಗಳು
ವಿಶ್ವ ಸುದ್ದಿಪತ್ರಿಕೆ
ಹೊಸ ಜೆರೂಸಲೇಮ್ ವಿಶ್ವಾದ್ಯಂತದ ಚರ್ಚುಗಳು
ಧರ್ಮಗುರು ಟೋನಿ ಅಲಾಮೊ ಅಲಾಮೊ ಕ್ರೈಸ್ತ ರಾಷ್ಟ್ರ ಸಂಪುಟ 17400




# ದೇವರ ಸೈನ್ಯ ಮತ್ತು ವಾಯುಪಡೆ

## (ವೀಕ್ಷಕರು)

**ಟೋನಿ ಅಲಾಮೊ ಅವರಿಂದ**

ಪ್ರವಾದಿ ಎಲೀಷನ ಸೇವಕನು ಬೇಗನೆ ಎದ್ದು, ತಾನು ಮತ್ತು ಎಲೀಷನು ಇದ್ದ ಪಟ್ಟಣವನ್ನು ಅಶ್ವಾರೋಹಿಗಳ ಸೈನ್ಯವು ಸುತ್ತುವರಿದಿರುವುದನ್ನು ಗಮನಿಸಿದನು. ಅವನು ಭೀತಿಗೊಂಡು, ಎಲೀಷನಿಗೆ, "ಅಯ್ಯೋ, ಸ್ವಾಮೀ, ಏನು ಮಾಡೋಣ?" ಎಂದನು [ಬೇರೆ ಮಾತಿನಲ್ಲಿ ಹೇಳುವುದಾದರೆ, ನಾವು ಈ ಸಂಕಟದಿಂದ ಜೀವಸಹಿತ ಹೊರಬರುವುದು ಹೇಗೆ?] ಆಗ ಎಲೀಷನು ತನ್ನ ಸೇವಕನಿಗೆ – ಹೆದರಬೇಡ; ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ ಎಂದು ಹೇಳಿ – ಕರ್ತನೇ, ಇವನು ನೋಡುವಂತೆ ಇವನ ಕಣ್ಣುಗಳನ್ನು ತೆರೆ ಎಂದು ಪ್ರಾರ್ಥಿಸಲು [ದೇವರಲ್ಲಿ] ಕರ್ತನು ಅವನ ಕಣ್ಣುಗಳನ್ನು ತೆರೆದನು. ಆಗ ಎಲೀಷನ ರಕ್ಷಣೆಗಾಗಿ ಸುತ್ತಣ ಗುಡ್ಡಗಳಲ್ಲಿ ಬಂದು ನಿಂತಿದ್ದ ಅಗ್ನಿಮಯವಾದ ರಥರಥಾಶ್ವಗಳು ಆ ಸೇವಕನಿಗೆ ಕಂಡವು" (2 ಅರಸುಗಳು 6:15-17).



*ಪ್ಯಾಸ್ಟರುಗಳಾದ ಟೋನಿ ಮತ್ತು ಸೂಸನ್ ಅಲಾಮೊ ಅಂತಾರಾಷ್ಟ್ರೀಯ ದೂರದರ್ಶನ ಕಾರ್ಯಕ್ರಮದಲ್ಲಿ 1973ರಲ್ಲಿ ಚಿತ್ರೀಕರಿಸಲಾಗಿದೆ*

ಎಲೀಷನು ತನ್ನ ಸೇವಕನಿಗೆ ತೋರಿಸಬೇಕೆಂದು ದೇವರನ್ನು ಕೇಳಿಕೊಂಡ ಆ ಸೈನ್ಯ ಅಥವಾ ದೇವರ ಸೇನೆಯು ಯೆರಿಕೋದ ಗೋಡೆಗಳನ್ನು ಬೀಳಿಸಿದ ಅದೇ ಸೈನ್ಯ ಅಥವಾ ದೇವರ ಸೇನೆಯಾಗಿದೆ (ಯೆಹೋಶುವ 6:20). ಯೆಹೋಶುವನು ಪ್ರಭುವಿನ ಸೇನೆಯ ಸೇನಾನಿಯನ್ನು ಯೆರಿಕೋದಲ್ಲಿ ಹೀಗೆ ಭೇಟಿಯಾದನು: "ಯೆಹೋಶುವನು ಯೆರಿಕೋವಿನ ಹತ್ತಿರದಲ್ಲಿದ್ದಾಗ ಒಂದಾನೊಂದು ದಿನ ಕಣ್ಣೆತ್ತಿ ನೋಡಲು ಒಬ್ಬ ಮನುಷ್ಯನು ಹಿರಿದ ಕತ್ತಿಯನ್ನು ಕೈಯಲ್ಲಿ ಹಿಡಿದು ತನ್ನೆದುರಿನಲ್ಲಿ ನಿಂತಿರುವದನ್ನು ಕಂಡನು. ಯೆಹೋಶುವನು ಅವನ ಬಳಿಗೆ ಹೋಗಿ – ನೀನು ನಮ್ಮವನೋ ಅಥವಾ ಶತ್ರುಪಕ್ಷದವನೋ ಎಂದು ಕೇಳಲು ಆ ಮನುಷ್ಯನು – ನಾನು ಅಂಥವನಲ್ಲ; ಕರ್ತನ [ಯೇಸುವಿನ ಮೂಲರೂಪ] ಸೇನಾಪತಿಯು; ಈಗಷ್ಟೇ ಬಂದಿದ್ದೇನೆ ಎಂದನು. ಆಗ ಯೆಹೋಶುವನು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ – ಸ್ವಾಮಿಯವರು ತಮ್ಮ ಸೇವಕನಿಗೆ ಏನು ಆಜ್ಞಾಪಿಸಬೇಕೆಂದಿದ್ದೀರಿ ಎನ್ನಲು ಕರ್ತನ ಸೇನಾಪತಿಯು – ನಿನ್ನ ಕಾಲಿನಿಂದ ಕೆರಗಳನ್ನು ತೆಗೆದುಹಾಕು; ನೀನು ನಿಂತಿರುವ ಸ್ಥಳವು ಪರಿಶುದ್ಧವಾದದ್ದು ಎಂದು ಯೆಹೋಶುವನಿಗೆ ಹೇಳಿದನು. ಅವನು ಹಾಗೆಯೇ ಮಾಡಿದನು.

"ಯೆರಿಕೋದವರು ಇಸ್ರಾಯೇಲ್ಯರಿಗೆ ಹೆದರಿ ತಮ್ಮ ಪಟ್ಟಣದ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿಕೊಂಡರು. ಯಾರೂ ಒಳಗೆ ಹೋಗಲಿಲ್ಲ; ಹೊರಗೆ ಬರಲಿಲ್ಲ. [ಏಕೆಂದರೆ ದೇವರು ಇಸ್ರಾಯೇಲ್ಯರ ಪಕ್ಷದಲ್ಲಿದ್ದರು ಎಂದು ಅವರಿಗೆ ತಿಳಿದಿತ್ತು ಮತ್ತು ದೇವರು ತಮ್ಮನ್ನು ನಾಶ ಮಾಡುವರು ಎಂದು ಕೂಡ ಅವರಿಗೆ ತಿಳಿದಿತ್ತು]. ಆಗ ದೇವರು ಯೆಹೋಶುವನಿಗೆ – ನೋಡು, ನಾನು ಯೆರಿಕೋವನ್ನೂ ಅದರ ಅರಸನನ್ನೂ ಯುದ್ಧವೀರನನ್ನೂ ನಿನ್ನ ಕೈಗೆ ಒಪ್ಪಿಸಿದ್ದೇನೆ. ನಿಮ್ಮ ಭಟರೆಲ್ಲಾ ಆರು ದಿವಸಗಳ ವರೆಗೆ ದಿನಕ್ಕೆ ಒಂದು ಸಾರಿ ಪಟ್ಟಣವನ್ನು ಸುತ್ತಲಿ [ಯೆರಿಕೋದ ಪಾಪಿ ಜನರ ಸಂಪೂರ್ಣ ನಾಶದ ಮೊದಲು ಅವರನ್ನು ಮಾನಸಿಕವಾಗಿ ಹೆದರಿಸಲು ಇದನ್ನು ಮಾಡಬೇಕಿತ್ತು]. ಏಳು ಮಂದಿ ಯಾಜಕರು ಕೊಂಬುಗಳನ್ನು ಹಿಡಿದುಕೊಂಡು ಮಂಜೂಷದ ಮುಂದೆ ನಡೆಯಲಿ. ಏಳನೆಯ ದಿವಸ ನೀವು ಪಟ್ಟಣವನ್ನು ಏಳು ಸಾರಿ ಸುತ್ತಬೇಕು; ಯಾಜಕರು ಕೊಂಬುಗಳನ್ನು ಊದಬೇಕು. ಅವರು ದೀರ್ಘವಾಗಿ ಊದುವ ಕೊಂಬಿನ ಧ್ವನಿಯು ಕೇಳಿಸುತ್ತಲೇ ನೀವೆಲ್ಲರೂ ಮಹತ್ತರವಾಗಿ ಆರ್ಭಟಿಸಿರಿ. ಆಗ ಪಟ್ಟಣದ ಗೋಡೆಯು ತಾನೇ ಬಿದ್ದುಹೋಗುವುದು [ಇದನ್ನು ಪ್ರಭುವಿನ ಸೇನೆಯ ಕಾಣದ ಕೈ ನೆರವೇರಿಸುತ್ತದೆ]; ಪ್ರತಿಯೊಬ್ಬನೂ ನೆಟ್ಟಗೆ ಒಳನುಗ್ಗಬಹುದು ಎಂದು ಹೇಳಿದನು.

"ಆಗ ನೂನನ ಮಗನಾದ ಯೆಹೋಶುವನು ಯಾಜಕರನ್ನು ಕರೆದು ಅವರಿಗೆ – ಒಡಂಬಡಿಕೆಯ ಮಂಜೂಷವನ್ನು ಹೊತ್ತುಕೊಂಡು ಹೋಗಿರಿ; ಏಳು ಮಂದಿ ಯಾಜಕರು ಕೊಂಬುಗಳನ್ನು ಹಿಡಿದುಕೊಂಡು ದೇವರ ಮಂಜೂಷದ ಮುಂದೆ ನಡೆಯಲಿ ಅಂದನು. ಮತ್ತು ಅವನು ಜನರಿಗೆ – ಹೋಗಿ ಪಟ್ಟಣವನ್ನು ಸುತ್ತಿರಿ. ಯುದ್ಧಸನ್ನದ್ಧರೆಲ್ಲರೂ ದೇವರ ಮಂಜೂಷದ ಮುಂದೆ ಹೋಗಲಿ ಎಂದು ಹೇಳಿದನು. ಯೆಹೋಶುವನು ಆಜ್ಞಾಪಿಸಿದಂತೆಯೇ ಏಳು ಮಂದಿ [ಯೆಹೂದ್ಯ]

*(ಪುಟ 2ರಲ್ಲಿ ಮುಂದುವರಿದಿದೆ)*

# ದೇವರ ಸೈನ್ಯ ಮತ್ತು ವಾಯುಪಡೆ
## (ವೀಕ್ಷಕರು)

*(ಪುಟ 1 ರಿಂದ ಮುಂದುವರಿದಿದೆ)*

ಯಾಜಕರು ಕೊಂಬುಗಳನ್ನು ಹಿಡಿದುಕೊಂಡು ಊದುತ್ತಾ ದೇವರ ಮುಂದೆ ನಡೆದರು. ದೇವರ ಒಡಂಬಡಿಕೆಯ ಮಂಜೂಷವು ಅವರ ಹಿಂದೆ ಹೋಯಿತು. ಯುದ್ಧಸನ್ನದ್ಧರಾದವರು ಕೊಂಬುಗಳನ್ನು ಊದುತ್ತಿದ್ದ ಯಾಜಕರ ಮುಂದೆ ಇದ್ದರು. ಹಿಂದಿನ ದಳವು ಮಂಜೂಷದ ಹಿಂದಿತ್ತು. ಕೊಂಬುಗಳನ್ನು ಊದುತ್ತಲೇ ಹೋಗುತ್ತಿದ್ದರು. ಯೆಹೋಶುವನು ಜನರಿಗೆ – ನೀವು ಈಗ ಆರ್ಭಟಿಸಬಾರದು; ನಿಮ್ಮ ಧ್ವನಿಯು ಕೇಳಿಸದಿರಲಿ, ನಿಮ್ಮ ಬಾಯಿಂದ ಒಂದು ಮಾತೂ ಹೊರಡದಿರಲಿ. ಆರ್ಭಟಿಸಿರೆಂದು ನಾನು ಹೇಳುವ ದಿವಸದಲ್ಲಿ ಮಾತ್ರ ಆರ್ಭಟಿಸಿರಿ ಎಂದು ಆಜ್ಞಾಪಿಸಿದನು.

"ಅವನು ದೇವರ ಮಂಜೂಷವನ್ನು ಒಂದು ಸಾರಿ ಪಟ್ಟಣವನ್ನು ಸುತ್ತಿಸಿದ ಮೇಲೆ ಅವರು ತಿರುಗಿ ಪಾಳಯಕ್ಕೆ ಬಂದು ರಾತ್ರಿಕಳೆದರು. ಯೆಹೋಶುವನು ಬೆಳಿಗ್ಗೆ ಎದ್ದನು. ಯಾಜಕರು ದೇವರ ಮಂಜೂಷವನ್ನು ಹೊತ್ತುಕೊಂಡು ಹೊರಟರು. ಏಳು ಮಂದಿ ಯಾಜಕರು ಕೊಂಬುಗಳನ್ನು ಊದುತ್ತಾ ದೇವರ ಮಂಜೂಷದ ಮುಂದೆ ನಡೆದರು. ಯುದ್ಧಸನ್ನದ್ಧರು ಅವರ ಮುಂದಿದ್ದರು; ಹಿಂದಿನ ದಳವು ಮಂಜೂಷದ ಹಿಂದಿತ್ತು. ಕೊಂಬುಗಳನ್ನು ಊದುತ್ತಲೇ ಹೋಗುತ್ತಿದ್ದರು. ಹೀಗೆ ಎರಡನೆಯ ದಿನದಲ್ಲಿಯೂ ಪಟ್ಟಣವನ್ನು ಸುತ್ತಿ ಪಾಳೆಯಕ್ಕೆ ಹಿಂದಿರುಗಿದರು. ಆರು ದಿವಸ ಈ ಪ್ರಕಾರ ಮಾಡಿದರು.

"ಏಳನೆಯ ದಿನದಲ್ಲಿ ಅವರು ಸೂರ್ಯೋದಯವಾಗುತ್ತಲೇ ಎದ್ದು ಅದೇ ಕ್ರಮದಲ್ಲಿ ಪಟ್ಟಣವನ್ನು ಏಳು ಸಾರಿ ಸುತ್ತಿದರು. ಈ ದಿವಸದಲ್ಲಿ ಮಾತ್ರ ಅದನ್ನು ಏಳು ಸಾರಿ ಸುತ್ತಿದರು. ಏಳನೆಯ ಸಾರಿ ಸುತ್ತುವಾಗ ಯಾಜಕರು ಕೊಂಬುಗಳನ್ನು ಊದಲು ಯೆಹೋಶುವನು ಜನರಿಗೆ – ಆರ್ಭಟಿಸಿರಿ, ದೇವರು ನಿಮಗೆ ಈ ಪಟ್ಟಣವನ್ನು ಕೊಟ್ಟಿದ್ದಾನೆ. ಈ ಪಟ್ಟಣವೂ ಇದರಲ್ಲಿರುವದೆಲ್ಲವೂ ದೇವರಿಗೆ ಶಾಪಗ್ರಸ್ತವಾದದ್ದೆಂದು ತಿಳಿಯಿರಿ. ಸೂಳೆಯಾದ ರಾಹಾಬಳೂ ಅವಳ ಸಂಗಡ ಮನೆಯಲ್ಲಿರುವವರೆಲ್ಲರೂ ಉಳಿಯಲಿ; ನಾವು ಕಳುಹಿಸಿದ ದೂತರನ್ನು ಅವಳು ಅಡಗಿಸಿಟ್ಟಳಲ್ಲಾ. ನೀವಾದರೋ ದೇವರಿಗೆ ಮೀಸಲಾದ ವಸ್ತುಗಳ ವಿಷಯದಲ್ಲಿ ಜಾಗರೂಕತೆಯಿಂದಿರಬೇಕು. ನೀವು ಅವುಗಳಲ್ಲಿ ಯಾವುದನ್ನಾದರೂ ತೆಗೆದುಕೊಂಡರೆ ಇಸ್ರಾಯೇಲ್ಯರ ಪಾಳೆಯವು ಶಾಪಕ್ಕೆ ಗುರಿಯಾಗಿ ಕೆಟ್ಟೀತು. ಎಲ್ಲಾ ಬೆಳ್ಳಿಬಂಗಾರವೂ ಹಿತ್ತಾಳೆ ಕಬ್ಬಿಣಗಳ ಪಾತ್ರೆಗಳೂ ಯೆಹೋವನಿಗೆ ಮೀಸಲಾಗಿದ್ದು ಆತನ ಭಂಡಾರಕ್ಕೆ ಸೇರತಕ್ಕವುಗಳು ಅಂದನು.

"ಕೂಡಲೆ ಜನರ ಆರ್ಭಟವೂ ಕೊಂಬುಗಳ ಧ್ವನಿಯೂ ಉಂಟಾದವು. ಜನರು ಕೊಂಬಿನ ಧ್ವನಿಯನ್ನು ಕೇಳಿ ಮಹತ್ತರವಾಗಿ ಆರ್ಭಟಿಸಲು ಪಟ್ಟಣದ ಗೋಡೆಯು ತಾನೇ ಬಿದ್ದು ಹೋಯಿತು [ಇದನ್ನು ಪ್ರಭುವಿನ ಸೇನೆ ಮತ್ತು ಪ್ರಭುವಿನ ಸೇನೆಯ ಸೇನಾಧಿಪತಿಯು ನೆರವೇರಿಸಿದರು]. ಪ್ರತಿಯೊಬ್ಬರೂ ಪಟ್ಟಣದಲ್ಲಿ ನೇರವಾಗಿ ನುಗ್ಗುತ್ತ ಹೋದರು. ಅದು ಅವರ ಸ್ವಾಧೀನವಾಯಿತು" (ಯೆಹೋಶುವ 5:13-6:20).

ಹನೋಕನ ಪುಸ್ತಕದಲ್ಲಿ, ಮಹಾನ್ ಪ್ರವಾದಿಯಾದ ಹನೋಕ ಕಾವಲಿಗರ ಬಗ್ಗೆ ಮುನ್ಸೂಚನೆ ಕೊಡುತ್ತಾರೆ. ಈ ಕಾವಲಿಗರು ದೇವರ ದೂತರಾಗಿದ್ದು, ಪ್ರಭುವಿನ ದಿವ್ಯ ಸೇನೆಯವರಾಗಿದ್ದಾರೆ. ಅವರನ್ನು ಕೆಲವೊಮ್ಮೆ ಭೂಮಿಯ ಮೇಲಿರುವ ದೇವರ ಪವಿತ್ರ ಜನರ ರಕ್ಷಕ ದೇವತೆಗಳು ಎಂದೂ ಕರೆಯಲಾಗುತ್ತದೆ.

ಕೆಟ್ಟ ದೇವದೂತರಿದ್ದಾರೆ, ಮತ್ತು ಒಳ್ಳೆಯ ದೇವದೂತರಿದ್ದಾರೆ. ಈ ದೇವದೂತರಲ್ಲಿ ಮೂರರಲ್ಲೊಂದು ಭಾಗವನ್ನು – ಕೆಟ್ಟವರನ್ನು – ಅವರ ನಾಯಕನಾದ ಸ್ವತಃ ಸೈತಾನನೊಂದಿಗೆ (ಲೂಕ 10:18) ಪರಲೋಕದಿಂದ ಹೊರದಬ್ಬಲಾಯಿತು ಎಂದು ಪ್ರಕಟನೆ 12:4 ಹೇಳುತ್ತದೆ. ಆದರೆ ನೆನಪಿಡಿ, ದೇವದೂತರಲ್ಲಿ ಮೂರರಲ್ಲಿ ಎರಡು ಭಾಗದವರು – ಒಳ್ಳೆಯವರು – ದೇವರ ಸೇವೆಯಲ್ಲಿ ಉಳಿದರು. ಮೂರರಲ್ಲೊಂದು ಭಾಗದ ಕೆಟ್ಟ ದೇವದೂತರು ಕೇವಲ ಕೆಟ್ಟವರು ಮಾತ್ರವಲ್ಲ, ಅವರು ಬಹಳ ದುಷ್ಟರೂ ಕೂಡ.

"ಪರಲೋಕದಲ್ಲಿ ಮತ್ತೊಂದು ಲಕ್ಷಣವು ಕಾಣಿಸಿತು. ಅದೇನೆಂದರೆ ಕೆಂಪಾದ ಮಹಾ ಘಟಸರ್ಪವಿತ್ತು [ಪಿಶಾಚಿ]; ಅದಕ್ಕೆ ಏಳು ತಲೆಗಳೂ..." ಎಂದು ಪ್ರಕಟನೆ 12:3 ಹೇಳುತ್ತದೆ. "ಆ ಏಳು ತಲೆಗಳು ಆ ಸ್ತ್ರೀ ಕೂತುಕೊಂಡಿರುವ ಏಳು ಬೆಟ್ಟಗಳೇ [ಇಟಲಿಯ ರೋಮ್‌ನ ಬೆಟ್ಟಗಳು]" (ಪ್ರಕಟನೆ 17:9). ಈ ಸ್ತ್ರೀಯು ಸುಳ್ಳು ಪ್ರವಾದಿ, ಸುಳ್ಳು ಚರ್ಚ್, ಕುಪಂಥ, ವ್ಯಾಟಿಕನ್ ಎಂಬ ಮೃಗದ ಮುಖ್ಯಸ್ಥೆ, ರೋಮನ್ ಕ್ಯಾಥೊಲಿಕ್, ಸಲಿಂಗಕಾಮಿ, ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡುವ ಚರ್ಚ್ ಆಗಿದ್ದಾಳೆ.

ಆ ಏಳು ತಲೆಗಳಿಗೆ ಹತ್ತು ಕೊಂಬುಗಳಿವೆ ಎಂದು ಹೇಳುತ್ತಾ ಪ್ರಕಟನೆ 12:3 ಮುಂದುವರಿಯುತ್ತದೆ. ಈ ಹತ್ತು ಕೊಂಬುಗಳು, ಸೈತಾನನ ಹೊಸ ವಿಶ್ವ ಪಂಥ, ಅಥವಾ ಒಂದು-ವಿಶ್ವ ಸರ್ಕಾರದೊಂದಿಗೆ ಒಂದುಗೂಡಿರುವ, ಕೆಲ ಅವಧಿಯಿಂದಲೂ (ಕೊನೆಯ ದೇಶ ಗ್ರೀಸ್) ತಮ್ಮ ಬಲವನ್ನು ರೋಮ್‌ನ ವ್ಯಾಟಿಕನ್ ಗೆ (ಯು.ಎನ್., ಹೊಸ ವಿಶ್ವ ಪಂಥ) ನೀಡುವ ಹತ್ತು ಐರೋಪ್ಯ ದೇಶಗಳ ಸಂಕೇತವಾಗಿವೆ. "...ಅದರ ತಲೆಗಳ ಮೇಲೆ ಏಳು ಮುಕುಟಗಳಿದ್ದವು [ಈ ಏಳು ಮುಕುಟಗಳು, ತಾತ್ಕಾಲಿಕವಾಗಿ ಏಳು ಭೂಖಂಡಗಳ ಮೇಲೆ, ಅಥವಾ ಬೇರೆ ಮಾತಿನಲ್ಲಿ, ಸಂಪೂರ್ಣ ಜಗತ್ತಿನ ಮೇಲೆ ಆಡಳಿತ ನಡೆಸುತ್ತಿರುವ ಪಿಶಾಚಿಯ ಹೊಸ ವಿಶ್ವ ಪಂಥವನ್ನು ಪ್ರತಿನಿಧಿಸುತ್ತವೆ]."[1]

"ಅದರ ಬಾಲವು ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರರಲ್ಲೊಂದು ಭಾಗವನ್ನು ಎಳೆದು [ನಕ್ಷತ್ರಗಳು ದುಷ್ಟ ದೇವದೂತರು.[2] ನಕ್ಷತ್ರಗಳು ದೂತರ ಪ್ರತೀಕ ಎಂದು ಪ್ರಕಟನೆ 1:20 ಹೇಳುತ್ತದೆ], [ಘಟಸರ್ಪವು, ಸೈತಾನನು] ಭೂಮಿಗೆ [ದುಷ್ಟ ಮತ್ತು ಕೆಟ್ಟ ದೇವದೂತರಲ್ಲಿ ಮೂರರಲ್ಲೊಂದು ಭಾಗವನ್ನು] ಹಾಕಿತು. ಹೆರುತ್ತಿದ್ದ ಆ ಸ್ತ್ರೀಯು [ತನ್ನ ಮುಕುಟದಲ್ಲಿ ಹನ್ನೆರಡು ನಕ್ಷತ್ರಗಳನ್ನು ಹೊಂದಿರುವವಳು. ಇದು (ಆ ಸ್ತ್ರೀ) ಕ್ರಿಸ್ತರ ಹೆಂಡತಿ, ಹೊಸ ಯೆರೂಸಲೇಮ್, ಇದು ಭೂಮಿಯ ಮೇಲೆ ಕ್ರಿಸ್ತರ ವಾಸ್ತವಿಕ ದೇಹ, ನಿಜವಾದ ಇಸ್ರಾಯೇಲ್, ಕ್ರೈಸ್ತಮತೀಯರು, ಕ್ಯಾಥೊಲಿಕರು ಎಂದೂ ಅಲ್ಲ, ದೇವರ ಆಯ್ದ ಜನರಾದ ಯೆಹೂದ್ಯರಿಂದ ಆರಂಭವಾದದ್ದು. ಈಗ ದೇವರು ಕ್ರಿಸ್ತರನ್ನು ತಮ್ಮ ರಕ್ಷಕರು ಎಂದು ಸ್ವೀಕರಿಸುವ ಎಲ್ಲಾ ದೇಶಗಳ ಜನರಿಗಾಗಿ ರಕ್ಷಣೆಯನ್ನು ತೆರೆದಿದ್ದಾರೆ]" (ಪ್ರಕಟನೆ 12:4).

ಈ ಸ್ತ್ರೀಯು (ಕ್ರಿಸ್ತರ ದೇಹ) ಕ್ರಿಸ್ತರಾಗಿದ್ದ ತನ್ನ ಮಗುವನ್ನು ಹೆರುವುದಕ್ಕಾಗಿ ಸಿದ್ಧಳಾಗಿದ್ದಳು. ಇದು, ಅರಸನಾದ ಹೆರೋದ ಮತ್ತು ಅವನ ಸೈನ್ಯದ ಮೂಲಕ, ಸೈತಾನನು ಕ್ರಿಸ್ತರನ್ನು ಆತನ ಜನ್ಮದ ಸಮಯದಲ್ಲಿ ಮತ್ತು/ಅಥವಾ ಎರಡು ವರ್ಷಗಳ ನಂತರ[3] ನಾಶ ಮಾಡಲು ಇಸ್ರಾಯೇಲಿನ ಎದುರು ನಿಂತಿದ್ದ ಸಮಯದ ಪುನರಾವರ್ತನೆ, ಏಕೆಂದರೆ ಕ್ರಿಸ್ತರು ಆಗಲೂ ಈಗಲೂ ಅರಸರ ಅರಸರು ಮತ್ತು ಪ್ರಭುಗಳ ಪ್ರಭುಗಳಾಗಿದ್ದಾರೆ, ಜಗತ್ತಿನ ರಕ್ಷಕರಾಗಿದ್ದಾರೆ, ತಮ್ಮ ರಕ್ಷಕರನ್ನಾಗಿ ಮತ್ತು ಅಧಿಕಾರಿಯನ್ನಾಗಿ ಸ್ವೀಕರಿಸುವ ಎಲ್ಲರ ಆತ್ಮಗಳನ್ನು ರಕ್ಷಿಸುವ ಮೂಲಕ ಸೈತಾನನ ಕೆಲಸಗಳನ್ನು ನಾಶ ಮಾಡುವವರಾಗಿದ್ದಾರೆ.[4] ಕ್ರಿಸ್ತರು "ದೊರೆತನಗಳನ್ನೂ ಅಧಿಕಾರಗಳನ್ನೂ ನಿರಾಯುಧರನ್ನಾಗಿ ಮಾಡಿ........ಅವುಗಳನ್ನು ಜಯಿಸಿರುವುದನ್ನು ಮೆರೆಸುತ್ತಾ ತೋರಿಸಿದರು" ಎಂದು ಕೊಲೊಸ್ಸೆಯವರಿಗೆ 2:15 ಹೇಳುತ್ತದೆ.

ಇವು ಕೊನೆಯ ದಿನಗಳು.[5] ಭೂಮಿಯು ದೇವರ ಸೈನ್ಯದಿಂದ ತುಂಬಿದೆ, ಮತ್ತು ಆಕಾಶವು ದೇವರ ವಾಯುಪಡೆಯಿಂದ ತುಂಬಿದೆ. ಇವು ಸಂಪೂರ್ಣ ಜಗತ್ತಿನಾದ್ಯಂತ ಲಕ್ಷಗಟ್ಟಲೆ ಜನರು ನೋಡಿರುವ ಯುಎಫ್‌ಒ ಗಳು. ಲೋಕದ ಜನರು ದೇವರ ಪದದ ಬಗ್ಗೆ ಅಜ್ಞಾನದಿಂದಿರುವುದರಿಂದ, ಈ ಯುಎಫ್‌ಒ ಗಳು ಇತರ ಗ್ರಹಗಳಿಂದ ಬಂದ ಜೀವಿಗಳು ಎಂದು ನಂಬುತ್ತಾರೆ. ನಾವು ಬೈಬಲ್ ಅನ್ನು ತಿಳಿದುಕೊಂಡಾಗ, ಲೋಕದ ಜನರು ಎಷ್ಟು ಮೋಸಹೋಗಿದ್ದಾರೆ ಎಂದು ನಮಗೆ ತಿಳಿಯುತ್ತದೆ, ಏಕೆಂದರೆ ಸಾಮಾನ್ಯವಾಗಿ ಯುಎಫ್‌ಒ ಎಂದು ಕರೆಯಲ್ಪಡುವ ಈ "ಹಾರುವ ತಟ್ಟೆಗಳು" ಇತರ ಗ್ರಹಗಳಿಂದ ಬಂದವುಗಳಲ್ಲ. ಅವು "ಕಾವಲಿಗರು", ದೇವರ ದೂತರು, ಕ್ರಿಸ್ತರು ಪುನಃ ಭೂಮಿಗೆ ಮರಳುವ ಮೊದಲು ಭೂಮಿಯ ಸಮೀಕ್ಷೆ ನಡೆಸುತ್ತಿರುವುದು. ಕಾವಲಿಗರು ನ್ಯಾಯವಿಚಾರಣೆಗೆ ಸಿದ್ಧರಾಗುತ್ತಿದ್ದಾರೆ.

ಪ್ರಕಟನೆ 16:1 ಹೀಗೆಂದು ಹೇಳುತ್ತದೆ, "ಆಗ ಪವಿತ್ರಸ್ಥಾನದಿಂದ ಬಂದ ಮಹಾ ಶಬ್ದವನ್ನು ಕೇಳಿದೆನು. ಅದು ಆ ಏಳು ಮಂದಿ ದೇವದೂತರಿಗೆ – ನೀವು ಹೋಗಿ ಆ ಏಳು ಪಾತ್ರೆಗಳಲ್ಲಿರುವ ದೇವರ ರೌದ್ರವನ್ನು ಭೂಮಿಯ ಮೇಲೆ ಹೊಯ್ಯಿರಿ ಎಂದು ಹೇಳಿತು." ದಾನಿಯೇಲನು 4:13ರಲ್ಲಿ, "ಒಬ್ಬ ಕಾವಲಿಗನು [ದೇವದೂತ-

---

**1** ದಾನಿಯೇಲನು 2:40, 7:19-25, ಪ್ರಕಟನೆ 13:2-8, 14:8, ಅಧ್ಯಾಯ 17, 18:2-24 **2** ಯೆಶಾಯ 14:12-17, ಮತ್ತಾಯ 25:41, ಲೂಕ10:18, 2 ಪೇತ್ರನು 2:4, ಯೂದನು 6, ಪ್ರಕಟನೆ 12:3-4, 7-9 **3** ಮತ್ತಾಯ 2:1-18 **4** ದಾನಿಯೇಲನು 7:13-14, 1 ತಿಮೊಥೆಯನಿಗೆ 6:14-16, ಇಬ್ರಿಯರಿಗೆ 2:14-15, 1 ಯೋಹಾನ 3:8, 4:14-15, ಪ್ರಕಟನೆ17:14, 19:16 **5** ಮತ್ತಾಯಅಧ್ಯಾಯ 24

ನು] ಹಾಗೂ ಒಬ್ಬ ಪವಿತ್ರನಾದವನು ಸ್ವರ್ಗದಿಂದ ಇಳಿದು ಬಂದನು" ಏಕೆಂದರೆ ದಾನಿಯೇಲನು 4:30 ರಲ್ಲಿ " ನನ್ನ ಮಹಿಮೆಯು ಪ್ರಸಿದ್ಧಿಗೆ ಬರುವಂತೆ [ದೇವರ ಮಹಿಮೆಯ ಬದಲಿಗೆ] ನನ್ನ ಸಾಮರ್ಥ್ಯ-ಬಲದಿಂದ [ದೇವರ ಬಲದ ಬದಲಿಗೆ] ರಾಜನಿವಾಸಕ್ಕಾಗಿ ನಾನು ಕಟ್ಟಿಸಿಕೊಂಡಿರುವುದು, ಇಗೋ, ಮಹಾಪಟ್ಟಣವಾದ ಈ ಬಾಬೆಲ್" ಎಂದು ಹೇಳಿದ ಅಹಂಕಾರಿಯಾದ ಅರಸನಾದ ನೆಬೂಕದ್ನೆಚ್ಚರನ ಮೇಲೆ ದೇವರ ನ್ಯಾಯತೀರ್ಪನ್ನು ತರಲು ದಾನಿಯೇಲನು 4:13ರಲ್ಲಿ, "ಅನಿಮಿಷನಾದ ದೇವದೂತನು ಆಕಾಶದಿಂದಿಳಿದರು".

ಅರಸನಾದ ನೆಬೂಕದ್ನೆಚ್ಚರನ ವಿರುದ್ಧ ನಡೆಸಬೇಕೆಂದು ಕಾವಲಿಗನಿಗೆ ನೀಡಲಾದ ದೇವರ ನ್ಯಾಯತೀರ್ಪು ಇಲ್ಲಿದೆ: "ಈ ಮಾತು [ಇನ್ನೂ] [ಅಹಂಕಾರಿಯಾದ] ರಾಜನ ಬಾಯಿಂದ ಹೊರಡುತ್ತಿರುವಾಗ – ಅರಸನಾದ ನೆಬೂಕದ್ನೆಚ್ಚರನೇ, ನಿನಗಾದ ದೈವೋಕ್ತಿಯನ್ನು ಕೇಳು; ರಾಜ್ಯವು ನಿನ್ನಿಂದ ತೊಲಗಿದೆ, ಅವರು [ಕಾವಲಿಗರು] ನಿನ್ನನ್ನು ಮನುಷ್ಯರೊಳಗಿಂದ ತಳ್ಳುವರು ಮತ್ತು ನೀನು ಕಾಡುಮೃಗಗಳೊಂದಿಗೆ ವಾಸಿಸುವಿ, ದನಗಳಂತೆ ಹುಲ್ಲುಮೇಯುವುದೇ ನಿನಗೆ ಗತಿಯಾಗುವುದು; ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದನ್ನು ತನಗೆ ಬೇಕಾದವರಿಗೆ ಒಪ್ಪಿಸುತ್ತಾನೆ ಎಂಬದು ನಿನ್ನ ತಿಳುವಳಿಕೆಗೆ ಬರುವದರೊಳಗೆ ಏಳು ವರುಷ ನಿನಗೆ ಹೀಗೆ ಕಳೆಯುವುದು ಎಂದು ಆಕಾಶವಾಣಿಯಾಯಿತು. ಈ ನುಡಿಯು ನೆಬೂಕದ್ನೆಚ್ಚರನಲ್ಲಿ ತಕ್ಷಣವೇ ನೆರವೇರಿತು; ಅವನು ಮನುಷ್ಯರೊಳಗಿಂದ ತಳ್ಳಲ್ಪಟ್ಟು ದನಗಳಂತೆ ಹುಲ್ಲು ಮೇಯುತ್ತಾ ಆಕಾಶದ ಇಬ್ಬನಿಯಿಂದ ನೆನೆಯುತ್ತಾ ಇದ್ದನು; ಅವನ ಕೂದಲು ಹದ್ದುಗಳ ಗರಿಯಂತೆಯೂ ಅವನ ಉಗುರು ಹಕ್ಕಿಗಳ ಉಗುರಿನ ಹಾಗೂ ಬೆಳೆದವು" (ದಾನಿಯೇಲನು 4:31-33).

ಯೆರೆಮೀಯ 4:16ರಲ್ಲಿ, "ಇಗೋ, ಜನಾಂಗಗಳಿಗೆ ಅರುಹಿರಿ, ಮುತ್ತುವವರು ದೂರದೇಶದಿಂದ ಯೆರೂಸಲೇಮಿಗೆ ಬರುತ್ತಾರೆ, ಯೆಹೂದದ ಪಟ್ಟಣಗಳಿಗೆ ವಿರುದ್ಧವಾಗಿ ದನಿಗೈಯುತ್ತಾರೆ ಎಂದು ಪ್ರಚುರಪಡಿಸಿರಿ" ಎಂದು ದೇವರು ಯೆರೆಮೀಯನಿಗೆ ಹೇಳುತ್ತಾರೆ. ಯೂದಾಯದ ಪಟ್ಟಣಗಳ ವಿರುದ್ಧ ಬಹಳಷ್ಟು ಕ್ರೋಧವಿದೆ. ಅದೇಕೆಂದರೆ ಅವರು ಈಗಲೂ ಯೇಸುವನ್ನು ತಮ್ಮ ಉದ್ಧಾರಕನೆಂಬುದನ್ನು ನಿರಾಕರಿಸುತ್ತಾರೆ.

ಲೋಕದಲ್ಲಿ ಬಹುಶಃ ಎಲ್ಲರಿಗೂ ಯುಎಫ್‌ಒ ಗಳು (ಗುರುತಿಸಲಾಗದ ಹಾರುವ ವಸ್ತುಗಳು) ಎಂದು ಕರೆಯಲ್ಪಡುವವುಗಳ ಲಕ್ಷಗಟ್ಟಲೆ ಕಾಣಿಸುವಿಕೆಗಳೊಂದಿಗೆ ಪರಿಚಯವಿದೆ ಎಂದು ನನಗನಿಸುತ್ತದೆ, ಆದರೆ ಅವು ಯುಎಫ್‌ಒ ಗಳಲ್ಲ. ಅವು ದೇವರ ಕಾವಲಿಗರು ಅಥವಾ ದೂತರು ದೇವರ ನ್ಯಾಯತೀರ್ಪಿಗೆ ಮೊದಲಿನ, ಜಗತ್ತಿನ ಅಂತ್ಯದ ಮೊದಲಿನ, ಸಮಯದ ಅಂತ್ಯದ ಮೊದಲಿನ ಈ ಕೊನೆಯ ದಿನಗಳಲ್ಲಿ ಭೂಮಿಯ ಸಮೀಕ್ಷೆ ನಡೆಸುತ್ತಿರುವವು. ದೇವರ ಕರುಣೆಯಲ್ಲಿ, ಆತ, ಭೂಮಿಯು ನಾಶವಾಗುವುದಕ್ಕೆ ಮೊದಲು ದೇವರ ದೂತರಾದ ಕಾವಲಿಗರು ತಮ್ಮ "ಹಾರುವ ತಟ್ಟೆಗಳು" ಎಂದು ಕರೆಯಲ್ಪಡುವವುಗಳಲ್ಲಿ ಭೂಮಿಯ ಸಮೀಕ್ಷೆ ನಡೆಸುತ್ತಿರುವಂತಹ ನೂರಾರು ಕೊನೆ-ಕಾಲದ ಭವಿಷ್ಯವಾಣಿಗಳನ್ನು, ಸೂಚಕಗಳನ್ನು,ಮತ್ತು ಅದ್ಭುತಗಳನ್ನು ನೋಡಲು ಎಲ್ಲರಿಗೂ ಅವಕಾಶ ನೀಡುತ್ತಿದ್ದಾರೆ. ಯೋವೇಲನ ಪುಸ್ತಕವು ಇದರ ಬಗ್ಗೆ ಮುನ್ಸೂಚನೆ ನೀಡುತ್ತದೆ,[6] ಅಪೋಸ್ತಲರ ಕೃತ್ಯಗಳು ಪುಸ್ತಕದಲ್ಲಿ ಅಪೋಸ್ತಲನಾದ ಪೇತ್ರನು ಕೂಡ ಮುನ್ಸೂಚನೆ ನೀಡುತ್ತಾರೆ: "ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು; ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು; ಅವರೂ ಪ್ರವಾದಿಸುವರು. ಕರ್ತನ ಆಗಮನದ ಗಂಭೀರವಾದ ಮಹಾದಿನವು ಬರುವುದಕ್ಕೆ ಮುಂಚೆ ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳನ್ನೂ ಕೆಳಗೆ ಭೂಮಿಯಲ್ಲಿ ಸೂಚಕಕಾರ್ಯಗಳನ್ನೂ ಉಂಟುಮಾಡುವೆನು. ರಕ್ತ, ಬೆಂಕಿ, ಹಬೆಯಂತೆ ಏರುವ ಹೊಗೆ, ಇವು ಉಂಟಾಗುವವು. ಸೂರ್ಯನು ಕತ್ತಲಾಗುವನು, ಚಂದ್ರನು ರಕ್ತವಾಗುವನು; ಆದರೂ ಕರ್ತನ ನಾಮವನ್ನು ಕೂಗುವವರೆಲ್ಲರಿಗೂ ರಕ್ಷಣೆಯಾಗುವುದೆಂದು ದೇವರು ಹೇಳುತ್ತಾನೆ ಎಂಬುದೇ" (ಅಪೋಸ್ತಲರ ಕೃತ್ಯಗಳು 2:17-21).

ಕಾವಲಿಗರು, ಅಂದರೆ, ಆಕಾಶದಲ್ಲಿರುವ ದೇವದೂತರು, ಮತ್ತು ಕ್ರೈಸ್ತಮತೀಯರಾದ ನಾವು (ಕ್ಯಾಥೊಲಿಕರಲ್ಲ), ದೇವರು ನಮ್ಮಿಬ್ಬರನ್ನೂ ಸೃಷ್ಟಿಸಿದರು ಎಂಬರ್ಥದಲ್ಲಿ ಸಂಬಂಧಿಗಳಾಗಿದ್ದೇವೆ. ದೇವರು ದೂತರನ್ನು ಸೃಷ್ಟಿಸಿದರು, ಮತ್ತು ದೇವರು ನಮ್ಮನ್ನು ಸೃಷ್ಟಿಸಿದರು. ಒಳ್ಳೆಯ ಮನುಷ್ಯರಿದ್ದಾರೆ, ಮತ್ತು ದುಷ್ಟ ಮನುಷ್ಯರಿದ್ದಾರೆ, ಏಕೆಂದರೆ ನಮ್ಮಲ್ಲಿ ಕೆಲವರು ಮಾತ್ರ ದೇವರ ಆಜ್ಞೆಗಳನ್ನು ಪಾಲಿಸುತ್ತೇವೆ.[7] ಯೋಹಾನನು ಬರೆದ ಮೊದಲ ಪತ್ರಿಕೆ 2:3-4: "ನಾವು ಆತನ ಆಜ್ಞೆಗಳನ್ನು ಕೈಗೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳಿದುಕೊಳ್ಳುತ್ತೇವೆ. ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಗೊಳ್ಳದೆ ನಡೆಯುವವನು ಸುಳ್ಳುಗಾರನೆನಿಸುತ್ತಾನೆ; ಸತ್ಯವೆಂಬುದು ಅವರಲ್ಲಿ ಇಲ್ಲ."

ತಾವು ಪ್ರಭುವನ್ನು ಪ್ರೀತಿಸುವುದಾಗಿ ಕೆಲವರು ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಆದಾಗ್ಯೂ, ಅವರ ನಿತ್ಯಜೀವನದಲ್ಲಿ, ಅವರು ದೇವರ ಕರೆಗೆ ಉತ್ತರಿಸುವುದಿಲ್ಲ, ಬದಲಿಗೆ ಆತನ ಧ್ವನಿಯನ್ನು ಅಲಕ್ಷ್ಯ ಮಾಡುತ್ತಾರೆ. ಕೆಲವರು ಭಾವನಾತ್ಮಕವಾಗಿ ಉತ್ಸುಕರಾದಾಗ ಮಾತ್ರ ತಾವು ದೇವರನ್ನು ಪ್ರೀತಿಸುವುದಾಗಿ ಹೇಳುತ್ತಾರೆ. ಉದಾಹರಣೆಗೆ, ಅವರು ಒಂದು ಸಿನಿಮಾ ನೋಡಲು, ಅಥವಾ ದೂರದರ್ಶನ ಕಾರ್ಯಕ್ರಮ ನೋಡಲು, ಕ್ರೀಡಾ ಕಾರ್ಯಕ್ರಮವನ್ನು ನೋಡಲು, ಅಥವಾ ಸಂಗೀತ ಕಾರ್ಯಕ್ರಮವನ್ನು ನೋಡಲು ಬಯಸಿದಾಗ, ಅವರೊಳಗಿನ ಒಂದು ಪ್ರಜ್ಞೆ ಅವರನ್ನು ನಿಷೇಧಿಸುತ್ತದೆ, ಆದರೂ ಅವರು ಹೋಗುತ್ತಾರೆ. ಅವರು ದೊಡ್ಡ ಪಾಪಗಳನ್ನು ಮಾಡಬಾರದೆಂದು ಅವರಿಗೆ ತಿಳಿದಿದೆ, ಆದರೆ ಅವರು ಚಿಕ್ಕದೆಂದು ಪರಿಗಣಿಸುವ ವಿಷಯಗಳ ಬಗ್ಗೆ ಅವರಿಗೆ ಚಿಂತೆ ಇಲ್ಲ. ಆರಾಧನೆಗಳಲ್ಲಿ ಪ್ರಾರ್ಥಿಸುವಾಗ, ತಾವು ಪ್ರಭುವಿನ ಆತ್ಮದಿಂದ ಪ್ರಭಾವಿತರಾಗಿದ್ದೇವೆ ಎಂಬುದಾಗಿ ಕೂಡ ಅವರು ಸಾಕ್ಷಿಯನ್ನು ಹೇಳಬಹುದು. ತಾವು ಕ್ರಿಸ್ತಮತೀಯರು ಎಂದು ತೋರ್ಪಡಿಸಿಕೊಳ್ಳುವವರು ಬಹಳ ಮಂದಿ ಇದ್ದಾರೆ. ನಿಜ ಹೇಳಬೇಕೆಂದರೆ, ಈ ರೀತಿಯಲ್ಲಿ ಪ್ರಭುವನ್ನು ಪ್ರೀತಿಸುವುದು ನಿಷ್ಪ್ರಯೋಜಕ.[8]

ಪ್ರಭುವಿನ ಬಗ್ಗೆ ಒಬ್ಬ ಸೋದರಿಯ ಶ್ರದ್ಧೆ ಎಷ್ಟು ಇರಬಹುದೆಂದರೆ ಹತ್ತು ಸೋದರರು ಜೊತೆಗೂಡಿದರೂ ಆಕೆಗೆ ಸರಿಸಾಟಿಯಾಗಲಾರರು. ಆಕೆ ಪ್ರಭುವನ್ನು ಪ್ರೀತಿಸುವ ಬಗ್ಗೆ ಮಾತನಾಡಿದಾಗ, ಆಕೆಯ ಮಾತು ಕೇಳುವವರ ಕಣ್ಣಲ್ಲಿ ನೀರು ತರಬಹುದು. ಆದಾಗ್ಯೂ, ಆಶ್ಚರ್ಯಕರವಾಗಿ, ಇಂತಹ ಸೋದರಿಗೆ ಕೋಪ ಬಂದಾಗ, ಆಕೆಯನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಸಹಜ ಬದುಕು ಅವಾಸ್ತವದ ಬದುಕಾಗಿದೆ (ದೇವರದ್ದ-

*(ಪುಟ 4ರಲ್ಲಿ ಮುಂದುವರಿದಿದೆ)*

6 ಯೋವೇಲನು 2:28-32

7 ಮತ್ತಾಯ 7:13-14, 21-23, ಲೂಕ 13:23-30 8 ಮತ್ತಾಯ 7:21-23, ಅಧ್ಯಾಯ 25

## ನಮ್ಮ 24-ತಾಸು ಪ್ರಾರ್ಥನೆ ಮತ್ತು ಮಾಹಿತಿ ದೂರವಾಣಿಯಿಂದ

ಮಿನಿಸ್ಟರ್ ವಿಲಿಮೀನ ಥಾಮಸ್ (ಫ್ಲಾರಿಡಾ ದ ಲಾಡರ್ಡೇಲ್ ಲೇಕಿನಲ್ಲಿ) ತಮ್ಮ ಪ್ಯಾಕೇಜ್ ಪಡೆದರು. ಅವರ ಬೈಬಲ್ ಅಧ್ಯಯನ ಗುಂಪಿನಲ್ಲಿದ್ದ ಎಲ್ಲ ಮಹಿಳೆಯರು ಕುಳಿತುಕೊಂಡು "ದೇವರ ಸೈನ್ಯ ಮತ್ತು ವಾಯುಪಡೆ"ಯನ್ನು ಓದಿದರು. ಅವರು ವರ್ಷಾನುಗಟ್ಟಲೆ ಕೇಳುತ್ತಿದ್ದ ಎಲ್ಲಾ ಮಿನಿಸ್ಟ್ರಿ ಬೋಧನೆಗಳಿಗಿಂತ (ಬಹಳ ಸಮಯದಿಂದ ಅವರು ಯಾರ ಬೋಧನೆಯನ್ನೂ ಕೇಳಿಲ್ಲ) ಸಾಹಿತ್ಯದ ಆ ತುಣುಕಿನಿಂದ ಹೆಚ್ಚು ತಿಳಿದುಕೊಂಡಿದ್ದಾಗಿ ಆಕೆ ಹೇಳಿದರು. ಅವರೆಲ್ಲರೂ ಆ ಸಾಹಿತ್ಯವನ್ನು ಓದಿ ಆನಂದಿಸಿದ್ದಾರೆ ಮತ್ತು ಸಿಡಿಗಳನ್ನು ಕೇಳುತ್ತಿದ್ದಾರೆ. ಟೋನಿಯವರು ಸ್ಫುಟಪಡಿಸಿದಂತೆ ಯಾರೂ ಸ್ಫುಟಪಡಿಸುವುದಿಲ್ಲ ಎಂದು ಅವರು ಹೇಳಿದರು. ಸಿಡಿಗಳನ್ನು ಮತ್ತು ಸಾಹಿತ್ಯವನ್ನು ಕಳುಹಿಸುವುದನ್ನು ದಯವಿಟ್ಟು ಮುಂದುವರಿಸಿ ಎಂದು ಆಕೆ ಹೇಳಿದರು. ಅವರು ಒಟ್ಟುಗೂಡಿ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಾರೆ, ಮತ್ತು ಟೋನಿಗಾಗಿ ಮತ್ತು :ಚರ್ಚ್‌ಗಾಗಿ ಪ್ರಾರ್ಥಿಸುತ್ತಾರೆ ಎಂಬುದನ್ನು ನಾವು ತಿಳಿದುಕೊಳ್ಳಬೇಕೆಂದು ಅವರು ಬಯಸುತ್ತಾರೆ. ಸಾಹಿತ್ಯ ಮತ್ತು ಸಿಡಿಗಳೊಂದಿಗೆ ಅಪ್ಡೇಟ್ ಮಾಡುತ್ತಲೇ ಇರಬೇಕೆಂದು ಆಕೆ ಪುನಃ ಕೇಳಿಕೊಂಡರು. ಮನಬಂದಂತೆ ವರ್ತಿಸುವ, ಅನೇಕ ವರ್ಷಗಳಿಂದ ಅವರಿಗೆ ಸಾಕ್ಷಿಯಾಗಲ್ಪಟ್ಟಿದ್ದ, ತನ್ನ ಮೂವರು ಮೊಮ್ಮಕ್ಕಳಿಗಾಗಿ ಪ್ರಾರ್ಥಿಸಲು ಕೂಡ ಆಕೆ ಚರ್ಚ್‌ಅನ್ನು ಕೇಳಿಕೊಂಡರು.

# ದೇವರ ಸೈನ್ಯ ಮತ್ತು ವಾಯುಪಡೆ
**(ವೀಕ್ಷಕರು)**

*(ಪುಟ 3 ರಿಂದ ಮುಂದುವರಿದಿದೆ)*

ಲ್ಲದ ಬದುಕು). ಒಂದು ದಿನ, ಸಹಜ ಬದುಕಿನ ಎಲ್ಲವನ್ನೂ ಚೂರುಚೂರು ಮಾಡಬೇಕಾಗುತ್ತದೆ. ನಮ್ಮ ಉತ್ಸಾಹ, ನಮ್ಮ ಸೋಗಿನ ಅಥವಾ ನಕಲಿ ಶ್ರದ್ಧೆ, ಪ್ರಭುವಿಗಾಗಿ ನಮ್ಮ ನಕಲಿ ಪ್ರೀತಿ, ಮತ್ತು ಪ್ರಭುವಿನ ನಮ್ಮ ನಕಲಿ ಸೇವೆ ಇವೆಲ್ಲವೂ ಸಹಜ ಮತ್ತು ಇವುಗಳಲ್ಲಿ ದೇವರ ಅಂಶದ ಕೊರತೆ ಇದೆ, ಇದು ಸತ್ಯ ಎಂದು ಸ್ಪಷ್ಟವಾಗಿ ನೋಡಲು ಪ್ರಭು ನಿಜವಾಗಿಯೂ ನಮ್ಮ ಮನಮುಟ್ಟಬೇಕು. ನಾವು ಸ್ಟೀಲ್ ಮತ್ತು ಹಿತ್ತಾಳೆಯ ಎಷ್ಟೇ ಪದರಗಳ ಗೋಡೆಗಳನ್ನು ಹೊಂದಿದ್ದರೂ, ಅದು ಹೊರಗಿನ ದ್ವಾರವಾಗಿರಲಿ, ಮಧ್ಯದ ದ್ವಾರವಾಗಿರಲಿ, ಅಥವಾ ಒಳಗಿನ ದ್ವಾರವಾಗಿರಲಿ, ಇವೆಲ್ಲವನ್ನೂ ಲೆಕ್ಕಿಸದೆ, ಒಳಗಿರುವ ಆತ್ಮದ ಪ್ರಕಾರ, ಇವೆಲ್ಲವನ್ನೂ ಒಂದೊಂದಾಗಿ ಪ್ರಭುವಿಗಾಗಿ ತೆರೆಯಬೇಕು. ಉತ್ಸಾಹ ಮತ್ತು ಶ್ರದ್ಧೆಯ ನಮ್ಮ ಅಭಿವ್ಯಕ್ತಿಗಳಲ್ಲಿ ನಮಗೆ ಸ್ವತಃ ಪ್ರಭುವೇ ಕಾಣುವುದಿಲ್ಲ ಎಂದು ಆಗ ನಮಗೆ ಅರಿವಾಗುತ್ತದೆ. ಆತನನ್ನು ಪ್ರಾಮಾಣಿಕವಾಗಿ ನಮ್ಮೊಳಗಿಂದ ಬಿಡುಗಡೆ ಮಾಡಬಹುದೆಂಬ ಮಟ್ಟಿಗೆ ಪ್ರಭು ನಮ್ಮ ಮನಮುಟ್ಟಿದರೆ ಮಾತ್ರ, ಯೋಹಾನ 15:2ರಲ್ಲಿ ಹೇಳಿರುವಂತೆ, ನಾವು ಫಲ ನೀಡುತ್ತೇವೆ. ಮರದ ಮೇಲಿರುವ ಹಣ್ಣು ಒಳಗಿರುವ ಜೀವದಿಂದ ಬರುತ್ತದೆ.

ಈಗ, ದುಷ್ಟ ದೇವದೂತರಿಗೆ ಸಂಬಂಧಿಸಿದ ಜನರು ದುಷ್ಟ ಮನುಷ್ಯರಾಗಿದ್ದಾರೆ. ಆದರೆ ನೆನಪಿಡಿ, ದುಷ್ಟ ದೇವದೂತರಿಗಿಂತ ದೈವಿಕ ದೇವದೂತರ ಸಂಖ್ಯೆ ಹೆಚ್ಚಾಗಿದೆ. ಅಶ್ಶೂರ್ಯರ ಸೈನ್ಯ ಅವರನ್ನು ಸುತ್ತುವರಿದಾಗ ಎಲೀಷನು ತನ್ನ ಸೇವಕನಿಗೆ ಇದನ್ನು ತೋರಿಸಿದನು. ಅಶ್ಶೂರ್ಯರೊಂದಿಗೆ ಇರುವುದಕ್ಕಿಂತ ಹೆಚ್ಚಿನ ಸೈನ್ಯ ಅವನೊಂದಿಗೆ ಮತ್ತು ಎಲೀಷನೊಂದಿಗೆ ಇರುವುದನ್ನು ಅವನ ಸೇವಕನು ನೋಡಲು ಸಾಧ್ಯವಾಗುವಂತೆ ಎಲೀಷನು ತನ್ನ ಸೇವಕನ ಕಣ್ಣುಗಳನ್ನು ತೆರೆಯಲು ಪ್ರಭುವನ್ನು ಕೇಳಿಕೊಂಡನು. ಅವನು ನೋಡಿದಾಗ, "ಎಲೀಷನ [ಮತ್ತು ಅವನ ಸೇವಕನ] ರಕ್ಷಣೆಗಾಗಿ ಸುತ್ತಣ ಗುಡ್ಡಗಳಲ್ಲಿ ಬಂದು ನಿಂತಿದ್ದ ಅಗ್ನಿಮಯವಾದ ರಥರಥಾಶ್ವಗಳು [ದೇವರ ಸೈನ್ಯ] ಆ ಸೇವಕನಿಗೆ ಕಂಡವು," ಭೂಮಿಯ ಮೇಲೆ ಎಲ್ಲರೂ ಮಾತನಾಡುತ್ತಿರುವ ಮತ್ತು ಮಾಡುತ್ತಿರುವ ಎಲ್ಲವನ್ನು ನೋಡುತ್ತಾ, ನಮ್ಮನ್ನು ಸುತ್ತುವರಿದು ರಕ್ಷಿಸುತ್ತಿರುವ ಕಾವಲಿಗರೊಂದಿಗೆ ಇಂದು ಸೇನಾಧೀಶ್ವರನಾದ ದೇವರ ರಾಜ್ಯದ ಸೈನ್ಯವು ಮಾಡುತ್ತಿರುವಂತೆ (2 ಅರಸುಗಳು 6:17). ಇದು ಆಕಾಶಗಳಲ್ಲಿ ಎಲ್ಲೆಲ್ಲಿಯೂ ದೇವರ ಕಾವಲಿಗರ ಮೂಲಕ ಹಾರುವ ತಟ್ಟೆಗಳಿಂದ ಮತ್ತು ಭೂಮಿಯ ಮೇಲಿರುವ ಕಾವಲಿಗರಿಂದ – ದೇವರ ಸೈನ್ಯ ಮತ್ತು ವಾಯುಪಡೆಯಿಂದ – ನಡೆಯುತ್ತಿದೆ.[9]

ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ದೇವರನ್ನು ಹುಡುಕಲು ಲೋಕದಲ್ಲಿರುವ ಎಲ್ಲರಿಗೂ ಈಗ ಸಮಯ ಬಂದಿದೆ, ಇದು ಮೊದಲನೆಯ ಮತ್ತು ಅತ್ಯಂತ ಮುಖ್ಯ ಆಜ್ಞೆ.[10] ಸದ್ಯದಲ್ಲೇ, ಪೂರ್ವ ಆಕಾಶವು ಮನುಷ್ಯಕುಮಾರನ ಸಂಕೇತದಿಂದ ತುಂಬಿಕೊಳ್ಳಲಿದೆ. ಈ ಘಟನೆಯನ್ನು ವಿವರಿಸುವ ಹಲವಾರು ಧರ್ಮಗ್ರಂಥಗಳಿವೆ. ಅವುಗಳಲ್ಲಿ ಒಂದು ಮತ್ತಾಯನ ಪುಸ್ತಕದ ಇಪ್ಪತ್ತನಾಲ್ಕನೇ ಅಧ್ಯಾಯ. ಮತ್ತೊಂದು ಯೆಶಾಯ ಪುಸ್ತಕದ ಎರಡನೇ ಅಧ್ಯಾಯ. ಮತ್ತೊಂದು ಪ್ರಕಟನೆಯ ಆರನೇ ಅಧ್ಯಾಯ.

ಮತ್ತಾಯ 24:30-51 ಹೀಗೆಂದು ಹೇಳುತ್ತದೆ, "ಆಗ ಮನುಷ್ಯಕುಮಾರನನ್ನು ಸೂಚಿಸುವ ಗುರುತು ಆಕಾಶದಲ್ಲಿ ಕಾಣಬರುವದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆ ಬಡಿದುಕೊಳ್ಳುವರು, ಮತ್ತು ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವುದನ್ನು ಕಾಣುವರು. ಮತ್ತು ಆತನು ತುತ್ತೂರಿಯ ಮಹಾ ಶಬ್ದದಿಂದ ತನ್ನ ದೂತರನ್ನು [ಪ್ರಭುವಿನ ಸೈನ್ಯ, ಕಾವಲಿಗರು] ಕಳುಹಿಸುವನು. ಆಯ್ದುಕೊಂಡವರನ್ನು ಅವರು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ನಾಲ್ಕು ದಿಕ್ಕುಗಳಿಂದ ಒಟ್ಟುಗೂಡಿಸುವರು. ಅಂಜೂರದ ಮರದ ದೃಷ್ಟಾಂತದಿಂದ ಬುದ್ಧಿ ಕಲಿಯಿರಿ. ಅದರ ಕೊಂಬೆ ಇನ್ನೂ ಎಳೆಯದಾಗಿದ್ದು ಎಲೆ ಬಿಡುವಾಗ ಬೇಸಿಗೆಯು ಹತ್ತಿರವಾಯಿತೆಂದು ತಿಳಿದುಕೊಳ್ಳುತ್ತೀರಲ್ಲಾ. ಹಾಗೆಯೇ ನೀವು ಸಹ ಇದನ್ನೆಲ್ಲಾ ನೋಡುವಾಗ ಆ ದಿನವು ಹತ್ತಿರವಿದೆ, ಬಾಗಿಲಲ್ಲೇ ಇದೆ ಎಂದು ತಿಳಿದುಕೊಳ್ಳಿರಿ. ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದುಹೋಗುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ ಮಾತುಗಳು ಅಳಿದುಹೋಗುವುದೇ ಇಲ್ಲ....ನೋಹನ ದಿನಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವುದು. ಹೇಗೆಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆ ಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದು ಪ್ರಳಯದ ನೀರು ಬಂದು ಎಲ್ಲರನ್ನೂ ಬಡಿದುಕೊಂಡುಹೋಗುವ ತನಕ ಏನೂ ತಿಳಿಯದೇ ಇದ್ದರಲ್ಲಾ. ಅದರಂತೆ ಮನುಷ್ಯಕುಮಾರನು

**9** 2 ಪೂರ್ವಕಾಲವೃತ್ತಾಂತ 16:9, ಜೆಕರ್ಯನು 1:7-11, 4:10, 6:1-7, ಪ್ರಕಟನೆ 7:1-3 **10** ಧರ್ಮೋಪದೇಶಕಾಂಡ 4:29, 6:5, 10:12-13, 11:13-14, 13:3-4, 16, 20, 26:16, 30:6, ಯೆಹೋಶುವನು 22:5, ಮತ್ತಾಯ 22:37-40, ಮಾರ್ಕ 12:29-31, ಲೂಕ 10:27

## ಪೆರು

*(ಸ್ಪ್ಯಾನಿಷ್ ಭಾಷೆಯಿಂದ ಅನುವಾದಿಸಲಾಗಿದೆ)*

ಸಹೋದರರೇ, ಮತ್ತು ಟೋನಿ ಅಲಾಮೊ ಮಿನಿಸ್ಟ್ರಿ,
ದೇವರು ನಿಮ್ಮನ್ನು ಅನುಗ್ರಹಿಸಲಿ,

ದೇವರ ಮಹಿಮೆಗಾಗಿ, ನಾವು ಈಗ ಒಂದು ಹೊಸ ಚರ್ಚಿನೊಂದಿಗೆ ಇದ್ದೇವೆ ಎಂದು ನಾನು ನಿಮಗೆ ತಿಳಿಸುತ್ತೇನೆ. ಅದು ಸೆಚ್ಯೂರಾ ಎಂಬಲ್ಲಿ ಪ್ಯೂರಾಗೆ ಸಮೀಪದಲ್ಲಿ ಸಲ್ಲಾನಾದಿಂದ ಮೂರು ಗಂಟೆಗಳಷ್ಟು ದೂರದಲ್ಲಿದೆ, ಅಲ್ಲಿ 23 ವಯಸ್ಕ ಸಹೋದರರು ಮತ್ತು 33 ಮಕ್ಕಳಿದ್ದಾರೆ. ನಾವು ವೈಯಕ್ತಿಕ ಕೆಲಸ ಮಾಡಲು ಹೋದೆವು, ಮನೆ ಮನೆಗೆ ನಿಮ್ಮ ಸಾಹಿತ್ಯವನ್ನು ಹಂಚಿದೆವು ಮತ್ತು ಅನೇಕರು ಬೋಧನೆ ಪಡೆಯುವುದನ್ನು ಮುಂದುವರಿಸಲು ಬಯಸಿದರು. ನಿನ್ನೆ ನಾವು ಪುನಃ ಜೊತೆಸೇರಿದೆವು ಮತ್ತು ಹಲವಾರು ಸಹೋದರರು ಬಂದರು. ಅವರು ಪ್ರಭುವನ್ನು ಸ್ವೀಕರಿಸಿದರು ಮತ್ತು ನಾವು ವಾರದಲ್ಲಿ ಮೂರು ಬಾರಿ ಜೊತೆಸೇರಲಿದ್ದೇವೆ. ಪ್ರಭುವಿಗೆ ವಿಜಯವಾಗಲಿ. ಯೇಸು ಬೇಗನೆ ಬರಲಿದ್ದಾರೆ.
ಆಂಡ್ರೆಸ್ ಚಿರೋಕ್ ಸಿಲ್ವಾ
ಟೋನಿ ಅಲಾಮೊ ಮಿನಿಸ್ಟ್ರೀಸ್
ಸಲ್ಲಾನಾ, ಪೆರು

## ಕೀನ್ಯಾ

ಪ್ರೀತಿಯ ಪ್ಯಾಸ್ಟರ್ ಟೋನಿ ಅಲಾಮೊ,

ಪ್ರತಿಯೊಂದು ಹೆಸರಿಗಿಂತ ಮೇಲಿರುವ ಶಕ್ತಿಶಾಲಿಯಾದ ಹೆಸರಿನಲ್ಲಿ, ನಮ್ಮ ಪ್ರಭುವಿನ ಮತ್ತು ರಕ್ಷಕರಾದ ಯೇಸು ಕ್ರಿಸ್ತರ ಹೆಸರಿನಲ್ಲಿ ನಮಸ್ಕಾರಗಳು. ನೀವು ನಮಗೆ ಸರಬರಾಜು ಮಾಡುತ್ತಿರುವ ಅಲಾಮೊ ಸಾಹಿತ್ಯದೊಂದಿಗೆ ನಾವು ನಿಜವಾಗಿಯೂ ನಮ್ಮ ನಗರದ ಮೇಲೆ ಪ್ರಭಾವ ಬೀರುತ್ತಿದ್ದೇವೆ ಎಂದು ನಿಮಗೆ ವರದಿ ಮಾಡಲು ನನಗೆ ಸಂತೋಷವಾಗುತ್ತದೆ. ರಕ್ಷಣೆ ಹೊಂದಿರಲಿ, ರಕ್ಷಣೆ ಹೊಂದದಿರಲಿ, ನಾವು ಎಲ್ಲರನ್ನೂ ತಲುಪುತ್ತಿದ್ದೇವೆ, ಮತ್ತು ಕಳೆದ ಒಂದು ತಿಂಗಳಿನಿಂದ ನಾವು 15 ಜನರು ರಕ್ಷಣೆ ಹೊಂದುವುದನ್ನು ನೋಡಿದ್ದೇವೆ ಮತ್ತು ಅವರು ಈಗ ಚರ್ಚಿನಲ್ಲಿದ್ದಾರೆ. ಅಲ್ಲದೆ, ಡಿಸೆಂಬರ್21ರಂದು ನೀವು ಕಳುಹಿಸಿದ ಪ್ಯಾಕೇಜ್ ನಮಗೆ ಸಿಕ್ಕಿತು. ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ಹೆಚ್ಚು ಸಾಹಿತ್ಯ ಮತ್ತು ಬೈಬಲ್ಲುಗಳಿಗಾಗಿ ನಾವು ಕೋರುತ್ತೇವೆ, ಏಕೆಂದರೆ ಅವುಗಳಿಗೆ ಬಹಳ ಬೇಡಿಕೆ ಇದೆ. ನಮ್ಮ ಪ್ಯಾಸ್ಟರ್ ಅವರ ಮೊಕದ್ದಮೆಯಲ್ಲಿ ದೇವರು ಮಧ್ಯಸ್ಥಿಕೆ ವಹಿಸಬೇಕೆಂದು ನಾವು ದೇವರಲ್ಲಿ ಪ್ರಾರ್ಥಿಸುವುದನ್ನು ಮುಂದುವರಿಸುತ್ತಾ, ದೇವರು ನಿಮಗೆ ಅನುಗ್ರಹಿಸಲಿ, ಏಕೆಂದರೆ ಪ್ರಾರ್ಥನೆಗಳ ಮೂಲಕ ಎಲ್ಲವೂ ಸಾಧ್ಯ ಎಂದು ನನಗೆ ತಿಳಿದಿದೆ.
ಆತನ ಸೇವೆಯಲ್ಲಿ ನಿಮ್ಮವರಾದ,
ಪ್ಯಾಸ್ಟರ್ ಡಾಲ್ಮಾಸ್ ಮುನೊಕೊ ಬುಂಗೋಮಾ, ಕೀನ್ಯಾ



ಅಲಾಮೊ ಮಿನಿಸ್ಟ್ರೀಸ್ ಆನ್‌ಲೈನ್
www.alamoministries.com

ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವುದು..... ಹೀಗಿರುವಾಗ ನಿಮ್ಮ ಕರ್ತನು ಬರುವ ದಿನವು ನಿಮಗೆ ಗೊತ್ತಿಲ್ಲವಾದ್ದರಿಂದ ಎಚ್ಚರವಾಗಿರಿ. ಕಳ್ಳನು ಬರುವ ಜಾವ ಮನೆಯ ಯಜಮಾನನಿಗೆ ತಿಳಿದಿದ್ದರೆ ಅವನು ಎಚ್ಚರವಾಗಿದ್ದು ತನ್ನ ಮನೆಗೆ ಕನ್ನಹಾಕಲು ಅವಕಾಶ ಕೊಡುತ್ತಿರಲಿಲ್ಲವೆಂದು ತಿಳುಕೊಳ್ಳಿರಿ. ಆದಕಾರಣ ನೀವೂ ಸಿದ್ಧರಾಗಿರಿ; ನೀವು ನೆನೆಯದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ. ಹಾಗಾದರೆ ಯಜಮಾನನು ತನ್ನ ಮನೆಯವರಿಗೆ ಹೊತ್ತು ಹೊತ್ತಿಗೆ ಆಹಾರ ಕೊಡಲಿಕ್ಕೆ ಅವರ ಮೇಲಿಟ್ಟ ನಂಬಿಗಸ್ತನೂ ವಿವೇಕಿಯೂ ಆದಂಥ ಆಳು ಯಾರು? ಯಜಮಾನನು ಬಂದು ಯಾವ ಆಳು ಹೀಗೆ ಮಾಡುವದನ್ನು ಕಾಣುವನೋ ಆ ಆಳು ಧನ್ಯನು. ಅಂಥವನನ್ನು ಅವನು ತನ್ನ ಎಲ್ಲಾ ಆಸ್ತಿಯ ಮೇಲೆ ನೇಮಿಸುವನು ಎಂದು ನಿಮಗೆ ನಿಜವಾಗಿ ಹೇಳುತ್ತೇನೆ. ಆದರೆ ಆ ಕೆಟ್ಟ ಆಳು – ನನ್ನ ಯಜಮಾನನು ತಡಮಾಡುತ್ತಾನೆ ಅಂತ ತನ್ನ ಮನಸ್ಸಿನಲ್ಲಿ ಅಂದುಕೊಂಡು ತನ್ನ ಜೊತೆ ಆಳುಗಳನ್ನು ಹೊಡೆಯುವದಕ್ಕೆ ತೊಡಗಿ ಕುಡುಕರ ಸಂಗಡ ತಿನ್ನುತ್ತಾ ಕುಡಿಯುತ್ತಾ ಇರುವುದಾದರೆ, ಅವನು ನೆನೆಯದ ದಿನದಲ್ಲಿಯೂ ತಿಳಿಯದ ಗಳಿಗೆಯಲ್ಲಿಯೂ ಆ ಆಳಿನ ಯಜಮಾನನು ಬಂದು ಅವನನ್ನು ಕಠಿಣವಾಗಿ ಹೊಡೆಸಿ ಕಪಟಿಗಳಿಗೆ ಆಗತಕ್ಕ ಗತಿಯನ್ನು ಅವನಿಗೆ ನೀಡುವನು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು."

ಪ್ರಭುವು ನಮಗೆ ಸಾಕಷ್ಟು ಸೂಚನೆಗಳನ್ನು ಕೊಡುತ್ತಾರೆ, ಆದ್ದರಿಂದ ನೀವು ಗಮನ ಕೊಡುತ್ತಿದ್ದರೆ, ನಿಮಗೆ ಅದು ಅನಿರೀಕ್ಷಿತವಾಗುವುದಿಲ್ಲ. ನೀವು ನಿಮ್ಮ ಮನಸ್ಸನ್ನು ನೆಡಬೇಕಾದ ಮತ್ತೊಂದು ದರ್ಶನ ಇಲ್ಲಿದೆ, ಏಕೆಂದರೆ ಈ ದರ್ಶನವು ನೀವು ಅಂದುಕೊಂಡದ್ದಕ್ಕಿಂತ ಬೇಗನೆ ವಾಸ್ತವಕ್ಕೆ ಬರಲಿದೆ: "ಪರಲೋಕವು ತೆರೆದಿರುವದನ್ನು ನಾನು ಕಂಡೆನು [ಇದು ದೇವರಿಂದ ಮತ್ತೊಂದು ಕಾಲಾಂತ್ಯದ ದರ್ಶನ]. ಆಗ ಇಗೋ, ಬಿಳೀ ಕುದುರೆಯು ನನಗೆ ಕಾಣಿಸಿತು; ಅದರ ಮೇಲೆ ಕೂತಿದ್ದವನಿಗೆ ನಂಬಿಗಸ್ತನೂ ಸತ್ಯವಂತನೂ ಎಂದು ಹೆಸರು. ಆತನು ನೀತಿಯಿಂದ ನ್ಯಾಯವಿಚಾರಿಸುತ್ತಾನೆ, ನೀತಿಯಿಂದ ಯುದ್ಧ ಮಾಡುತ್ತಾನೆ; ಆತನ ಕಣ್ಣುಗಳು ಬೆಂಕಿಯ ಉರಿಯಂತಿವೆ; ಆತನ ತಲೆಯ ಮೇಲೆ ಅನೇಕ ಮಕುಟಗಳುಂಟು; ಆತನಿಗೆ ಒಂದು ಹೆಸರು ಬರೆದುಕೊಟ್ಟಿದೆ, ಅದು ಆತನಿಗೇ ಹೊರತು ಮತ್ತಾರಿಗೂ ತಿಳಿಯದು. ಆತನು ರಕ್ತಪ್ರೋಕ್ಷಿತವಾದ ವಸ್ತ್ರವನ್ನು ಧರಿಸಿಕೊಂಡಿದ್ದನು. ಆತನಿಗೆ ದೇವರ ವಾಕ್ಯವೆಂದು ಹೆಸರು. ಪರಲೋಕದಲ್ಲಿರುವ ಸೈನ್ಯದವರು ಶುಭ್ರವಾಗಿಯೂ ನಿರ್ಮಲವಾಗಿಯೂ ಇರುವ ನಯವಾದ ನಾರುಮಡಿಯನ್ನು ಧರಿಸಿಕೊಂಡು ಬಿಳೀ ಕುದುರೆಗಳ ಮೇಲೆ ಹತ್ತಿದವರಾಗಿ ಆತನ ಹಿಂದೆ ಬರುತ್ತಿದ್ದರು [ಇವರು ಪ್ರಭುವಿನ ಸೈನ್ಯದವರು, ಕಾವಲಿಗರು]. ಜನಾಂಗಗಳನ್ನು ಹೊಡೆಯುವದಕ್ಕಾಗಿ ಹದವಾದ ಕತ್ತಿಯು ಆತನ ಬಾಯಿಂದ ಬರುತ್ತದೆ. ಆತನು ಅವರನ್ನು ಕಬ್ಬಿಣದ ಕೋಲಿನಿಂದ [ದೇವರ ಪದ] ಆಳುವನು.ಆತನು ಸರ್ವಶಕ್ತನಾದ ದೇವರ ಉಗ್ರಕೋಪವೆಂಬ ದ್ರಾಕ್ಷಿಯ ತೊಟ್ಟಿಯಲ್ಲಿರುವದನ್ನು ತುಳಿಯುತ್ತಾನೆ. ಆತನ ತೊಡೆಯ ಮೇಲಣ ವಸ್ತ್ರದಲ್ಲಿ – ರಾಜಾಧಿರಾಜನೂ ಕರ್ತರ ಕರ್ತನೂ [ಇದು ನಮ್ಮ ಪ್ರಭುವಾದ ಯೇಸು] ಎಂಬ ಹೆಸರು ಬರೆದಿದೆ" (ಪ್ರಕಟನೆ 19:11-16).

ನಾವು ಈಗ ಕಾಲಾಂತ್ಯದ ಕೊನೆಯ ಕೆಲವು ಗಳಿಗೆಗಳಲ್ಲಿ ಜೀವಿಸುತ್ತಿದ್ದೇವೆ. ಎಲ್ಲಾ ಸೂಚನೆಗಳು ಇಲ್ಲಿವೆ. ಒಂದು-ವಿಶ್ವ ಕ್ರಿಸ್ತ-ವಿರೋಧಿ ಸರ್ಕಾರ ಈಗ ಕಾರ್ಯಾಚರಣೆ ನಡೆಸುತ್ತಿದೆ. ದೇವರ ವಾಯುಪಡೆ ಹಲವಾರು ವರ್ಷಗಳಿಂದ ಕಾರ್ಯಾಚರಣೆ ನಡೆಸುತ್ತಿದೆ, ಮತ್ತು ಅನೇಕ ಲಕ್ಷಗಟ್ಟಲೆ ಜನರು ಅವುಗಳನ್ನು ನೋಡಿದ್ದಾರೆ (ಹಾರುವ ತಟ್ಟೆಗಳು, ಕಾವಲಿಗರು, ದೇವರ ಭವ್ಯ ವಾಯುಪಡೆ).ರೋಮ್‌ನಲ್ಲಿರುವ ಪೋಪರು ಹೊಸ ವಿಶ್ವ ಪಂಥ ಎಷ್ಟು ಅದ್ಭುತವಾಗಿದೆ ಎಂಬುದರ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ. ಸುನಾಮಿಗಳು, ಭಾರಿ ಅಲೆಗಳು, ಭೂಕಂಪಗಳು, ಎಲ್ಲಾ ರೀತಿಯ ವ್ಯಾಧಿಗಳು, ರೋಗಗಳು, ದೇಶಗಳ ಗೊಂದಲದ ಪರಿಸ್ಥಿತಿಗಳು, ಶೋಷಣೆಗಳು, ಮತ್ತು ಹಲವು ರೀತಿಯ ನೂರಾರು ಶಾಪಗಳಿವೆ.

ನೀವು ಒಂದೋ ಒಳ್ಳೆಯವರು ಅಥವಾ ಕೆಟ್ಟವರು.[11] ನೀವು ಕ್ರಿಸ್ತರನ್ನು ನಿಮ್ಮ ರಕ್ಷಕರನ್ನಾಗಿ ಸ್ವೀಕರಿಸುತ್ತೀರಿ, ಅಥವಾ ಆತನನ್ನು ನಿರಾಕರಿಸುತ್ತೀರಿ. ಬಹಳ ತಡವಾಗುವ ಮುನ್ನ ಆತನನ್ನು ಈಗಲೆ ಆಯ್ಕೆ ಮಾಡಿ. ನೀವು ನಿರಂತರತೆಯಿಂದ ಒಂದೇ ಉಸಿರು, ಒಂದೇ ಎದೆಬಡಿತ ದೂರವಿದ್ದೀರಿ.[12] ಈ ಪ್ರಾರ್ಥನೆಯನ್ನು ಹೇಳುವುದು ನಿಮ್ಮ ಆತ್ಮದ ಸಲುವಾಗಿ. ನಂತರ ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ ದೀಕ್ಷಾಸ್ನಾನ ಪಡೆಯಿರಿ, ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿರಿ.[13] ಬೈಬಲ್ ಸೊಸೈಟಿ ಆಫ್ ಇಂಡಿಯಾದ ಸತ್ಯವೇದವು' ಬೈಬಲನ್ನು [ಇಂಗ್ಲಿಷ್ ನ ಕಿಂಗ್ ಜೇಮ್ಸ್ ಆವೃತ್ತಿ]

*(ಪುಟ 8ರಲ್ಲಿ ಮುಂದುವರಿದಿದೆ)*

**11** ಮತ್ತಾಯ 7:15-20, ಯಾಕೋಬನು 3:11-12, ಪ್ರಕಟನೆ 20:11-15, 21:7-8, 24-27, 22:11-12, 14-15 **12** ಪ್ರಸಂಗಿ 3:19, ಯೆಶಾಯ 2:22 **13** ಮತ್ತಾಯ 28:19-20

## ಸ್ಟೀವೆನ್ ವೆಡೆಲ್ ಅವರ ಸಾಕ್ಷಿ



*ಸಹೋದರ ಸ್ಟೀವೆನ್ ವೆಡೆಲ್*

ನನ್ನ ಹೆಸರು ಸ್ಟೀವೆನ್ ವೆಡೆಲ್. ಅಕ್ಟೋಬರ್ ೨೦೧೨ರ ಅಂತ್ಯದಲ್ಲಿ ನಾನು ೫೯ ವರ್ಷದವನಾದೆನು. ನವೆಂಬರ್ ೭, ೧೯೭೧ರಂದು ನಾನು ಕ್ರಿಸ್ತರನ್ನು ನನ್ನ ವೈಯಕ್ತಿಕ ರಕ್ಷಕರನ್ನಾಗಿ ಪಡೆದೆನು. ಇದಕ್ಕೂ ಒಂದು ವಾರದ ಹಿಂದೆಯಷ್ಟೆ ನನಗೆ ೧೮ ವರ್ಷ ತುಂಬಿತ್ತು. ಆ ಸಮಯದಲ್ಲಿ ಕ್ರಿಸ್ತರು ನನ್ನ ಬದುಕಿನಲ್ಲಿ ಪ್ರವೇಶಿಸಿದರು ಮತ್ತು ಆತ ಪ್ರವೇಶಿಸದೆ ಹೋಗಿದ್ದರೆ, ಒಬ್ಬ ವ್ಯಕ್ತಿಯ ಬದುಕನ್ನು ಬದಲಾಯಿಸಬಲ್ಲ ದೇವರ ಶಕ್ತಿ ಮತ್ತು ಸಾಮರ್ಥ್ಯದ ಬಗ್ಗೆ ನೀವು ಈಗ ಓದುತ್ತಿರುವ ಸಾಕ್ಷಿಯನ್ನು ಓದುವ ಅವಕಾಶದ ಬದಲು ಅನೇಕ ವರ್ಷಗಳ ಹಿಂದೆಯೆ ಬಹುಶಃ ನೀವು ನನ್ನ ಬಗ್ಗೆ ನಿಧನವಾರ್ತೆಯನ್ನು ಓದಿರಬೇಕಾಗುತ್ತಿತ್ತು.

೧೯೭೧ರ ವಸಂತದಲ್ಲಿ ನಾನು ಪ್ರೌಢ ಶಾಲೆಯಿಂದ ಪದವಿ ಪಡೆದ ನಂತರ, ಕಾಲೇಜು ಮುಂದುವರಿಸುವ ಯಾವುದೇ ಮಹತ್ವಾಕಾಂಕ್ಷೆ ನನಗಿರಲಿಲ್ಲ. ನಾನೊಬ್ಬ ಕಪಟ-ಹಿಪ್ಪಿಯಾಗಿದ್ದೆ. ಕ್ಯಾಲಿಫೋರ್ನಿಯಾದ ಸ್ಯಾನ್ ಫ್ರ್ಯಾನ್ಸಿಸ್ಕೊಗೆ ಹೊರಟೆ, ಮೊದಲು ಕಾರಿನಲ್ಲಿ ಕೆಲವು ಗೆಳೆಯರೊಂದಿಗೆ, ನಂತರ ನನ್ನ ಹೆಬ್ಬೆರಳು ತೋರಿಸುತ್ತಾ, ಸ್ಯಾನ್ ಫ್ರ್ಯಾನ್ಸಿಸ್ಕೊದಿಂದ ಕೊಲೊರಾಡೊದ ಬೌಲ್ಡರ್ಗೆ, ಮತ್ತು ನಂತರ ಮರಳಿ ಕ್ಯಾಲಿಫೋರ್ನಿಯಾಗೆ, ಈ ಬಾರಿ ಲಾಸ್ ಎಂಜಲೀಸಿಗೆ ಹಿಚ್‌ಹೈಕ್ ಮಾಡಿದೆ.

ನಾನು ಯಾರೊಂದಿಗೆ ಪ್ರಯಾಣಿಸುತ್ತಿದ್ದೆನೊ, ಆ ಗೆಳೆಯನ ತಾಯಿ ಬೆವರ್ಲಿ ಹಿಲ್ಸ್ ನಲ್ಲಿ ಒಂದು ಬಹಳ ದೊಡ್ಡ ಮತ್ತು ಸುಂದರ ಮನೆಯಲ್ಲಿದ್ದರು. ನಮಗೆ ಕೆಲಸ ಮತ್ತು ಇರಲು ಒಂದು ಮನೆ ಸಿಗುವವರೆಗೆ ತನ್ನೊಂದಿಗೆ ಇರಲು ಆಕೆ ನಮಗೆ ಆಮಂತ್ರಣ ನೀಡಿದರು. ಆಕೆಯ ಮನೆಯಲ್ಲಿ ಒಂದು ಸುಂದರವಾದ ಹೊರಾಂಗಣ ಈಜು ಕೊಳವಿತ್ತು ಮತ್ತು ನಮಗಾಗಿ ಎಲ್ಲಾ ಖರೀದಿ ಮತ್ತು ಅಡುಗೆ ಮಾಡುವ ಒಬ್ಬ ಮನೆಕೆಲಸದಾಕೆ ಇದ್ದಳು. ಅದು ಆನಂದಿಸಲು ಒಂದು ಮಾದರಿಯಾದ ರಜೆಯಂತಹ ಸೆಟಿಂಗ್ ಆಗಬೇಕಿತ್ತು, ಆದರೆ ಅದು ನನ್ನ ಬದುಕಿನ ಅತ್ಯಂತ ದುಃಖಾರ್ತ ಸಮಯವಾಗಿತ್ತು.

ನಾನು ಸಂಪೂರ್ಣವಾಗಿ ಕಳೆದುಹೋಗಿದ್ದೇನೆ ಮತ್ತು ಬದುಕಿನಲ್ಲಿ ಯಾವುದೇ ನಿರೀಕ್ಷೆ ಇಲ್ಲವೆಂದು ನನಗೆ ಒಳಗೊಳಗೆ ಅನಿಸಿತು. ಬದುಕು ಮತ್ತು ಉದ್ದೇಶದ ಅರ್ಥದ ಬಗ್ಗೆ ನನ್ನ ಮನಸ್ಸು ಮತ್ತು ಆತ್ಮದಲ್ಲಿದ್ದ ನಿರಂತರ ಗೊಂದಲವನ್ನು ತೆಗೆಯಬಲ್ಲ ಯಾವುದೂ ಇರಲಿಲ್ಲ. ಒಳಗೆ ಸಿಕ್ಕಿಹಾಕಿಕೊಂಡಂತೆ ನನಗನಿಸಿತು. ನನಗೆ ಅರ್ಥವತ್ತಾದ ಬದುಕು ಬೇಕಿತ್ತು, ಇತರರಿಗೆ ನೆರವಾಗಬಹುದಾದ ಬದುಕು ಬೇಕಿತ್ತು. ಭ್ರಷ್ಟಾಚಾರ, ನಿರುತ್ಸಾಹ, ಅಪರಾಧ ಮತ್ತು ರಕ್ತಪಾತದಂಥ ನನ್ನ ಸುತ್ತಲಿನ ಲೋಕದ ಪರಿಸ್ಥಿತಿಯ ಬಗ್ಗೆ ನಾನು ನಿರಾಶೆಗೊಂಡಿದ್ದೆ. ನಾನು ಶಾಂತಿಯಿಂದ ತುಂಬಿದ ಲೋಕದಲ್ಲಿ ಬದುಕಲು ಬಯಸಿದ್ದೆನು, ಮತ್ತು ಕ್ಯಾಲಿಫೋರ್ನಿಯಾದ ಹಿಪ್ಪಿ ಚಳುವಳಿ ಸುತ್ತಲಿದ್ದ ತೀವ್ರವಾದ ಸ್ಪರ್ಧೆ-

*(ಪುಟ 6ರಲ್ಲಿ ಮುಂದುವರಿದಿದೆ)*

# ಸ್ಟೀವೆನ್ ವೆಡೆಲ್ ಅವರ ಸಾಕ್ಷಿ

*(ಪುಟ 5 ರಿಂದ ಮುಂದುವರಿದಿದೆ)*


ಗೆ ಪರ್ಯಾಯ ಉತ್ತರವನ್ನು ಒದಗಿಸಬಹುದೆಂದು ನಾನಂದುಕೊಂಡಿದ್ದೆ. ಗಾಂಜಾ ಮತ್ತು ಹಶಿಶ್ ಸೇದುವುದು, ಎಲ್ ಎಸ್ ಡಿ ಮತ್ತು ಇತರ ಭ್ರಾಮಕ ಮಾದಕವಸ್ತುಗಳನ್ನು ತೆಗೆದುಕೊಳ್ಳುವುದು ನಾನು ಹಪಹಪಿಸುತ್ತಿದ್ದ ಒಳನೋಟವನ್ನು ನನಗೆ ಕೊಡುತ್ತದೆ, ನಾನು ಬದುಕುತ್ತಿದ್ದ ಬದುಕಿಗೆ ಕಾರಣವನ್ನು ಕಂಡುಹಿಡಿಯುವುದಕ್ಕೆ ಒಳನೋಟವನ್ನು ಕೊಡುತ್ತದೆ ಎಂದು ನಾನಂದುಕೊಂಡಿದ್ದೆ. ನನಗೆ ಒಂಬತ್ತರಿಂದ-ಐದರ ಕೆಲಸ, ನಾಯಿಗಳು ಮತ್ತು ಬೆಕ್ಕುಗಳೊಂದಿಗೆ ಗೂಟದ ಬೇಲಿಯ ಮನೆ, ಮತ್ತು ನನ್ನನ್ನು ಎಲ್ಲಿಗೂ ತಲುಪಿಸಲು ಆಗದಿರುವಂಥ ಭವಿಷ್ಯ ಬೇಕಿರಲಿಲ್ಲ. ಬದುಕು ನಿಜವಾಗಿಯೂ ಯಾವುದಕ್ಕಾಗಿ ಇದೆ ಎಂದು ನಾನು ತಿಳಿದುಕೊಳ್ಳಬೇಕಿತ್ತು. ಮಾದಕವಸ್ತುಗಳು ಕೇವಲ ನನ್ನಲ್ಲಿ ಉಳಿದಿದ್ದ ನನ್ನ ವಿವೇಕವನ್ನು ಕಸಿದುಕೊಂಡವು ಮತ್ತು ಯಾವುದೇ ಕೆಲಸ ಮಾಡಲು ಸಾಧ್ಯವಾಗದಂತೆ ಬಹಳ ಕಡಿಮೆ ತಾರ್ಕಿಕ ಸಾಮರ್ಥ್ಯವನ್ನು ಉಳಿಸಿದವು ಅಷ್ಟೆ. ನನಗೆ ಹುಚ್ಚುಹಿಡಿಯುತ್ತಿದೆ ಎಂದೆನಿಸುತ್ತಿತ್ತು ಮತ್ತು ನಿಸ್ಸಂದೇಹವಾಗಿ, ಬಹುಶಃ ಹಾಗೇ ಆಗುತ್ತಿತ್ತು. ಆದರೆ ನನ್ನನ್ನು ಈ ರೀತಿ ಬೆಳೆಸಿರಲೇ ಇಲ್ಲ.

ನಾನು ನನ್ನ ಪ್ರಾರಂಭಿಕ ವರ್ಷಗಳನ್ನು ವಿದೇಶದಲ್ಲಿ ಬೆಳೆಯುತ್ತಾ ಕಳೆದೆನು. ನನ್ನ ತಂದೆ ಜಪಾನಿನ ಟೋಕಿಯೋದಲ್ಲಿ ಅಂತಾರಾಷ್ಟ್ರೀಯ ವೈ ಎಮ್ ಸಿ ಎ ಯೊಂದಿಗೆ ಕೆಲಸ ಮಾಡುತ್ತಿದ್ದರು, ಮತ್ತು ನಾವು ಪ್ರತಿ ರವಿವಾರ ನಿಷ್ಠೆಯಿಂದ ಅಪಂಥೀಯವಾದ ಚರ್ಚಿಗೆ ಹೋಗುತ್ತಿದ್ದೆವು. ನಾವು ಕ್ರೈಸ್ತಮತೀಯರೆಂದು ನನಗೆ ಯಾವಾಗಲೂ ಬೋಧಿಸಲಾಗಿತ್ತು, ಮತ್ತು ನನಗೆ ಮಾನವೀಯತೆಯನ್ನು, ಇತರರಿಗೆ ನೆರವಾಗುವುದನ್ನು ಯಾವಾಗಲೂ ಕಲಿಸಲಾಗಿತ್ತು. ಕ್ರಿಸ್ಮಸ್ ಮತ್ತು ಈಸ್ಟರ್, ವಿಶೇಷ ದಿನಗಳು ಎಂದು ನನಗೆ ತಿಳಿದಿತ್ತು, ಅವುಗಳಿಗೂ ಸಾಂಟಾ ಕ್ಲಾಸ್ ಅಥವಾ ಈಸ್ಟರ್ ಮೊಟ್ಟೆಗೂ ಯಾವುದೇ ಸಂಬಂಧವಿಲ್ಲವೆಂದೂ ನನಗೆ ತಿಳಿದಿತ್ತು. ನನ್ನನ್ನೂ ಸೇರಿದಂತೆ, ಎಲ್ಲವನ್ನೂ ಸೃಷ್ಟಿಸಿದ ಒಬ್ಬ ದೇವರು, ಒಬ್ಬ ಸೃಷ್ಟಿಕರ್ತರು ಇದ್ದಾರೆಂದು, ಹೆಚ್ಚಿನ ಮಕ್ಕಳು ನಂಬುವಂತೆ, ನಾನೂ ನನ್ನ ಆತ್ಮದಲ್ಲಿ ನಂಬಿದ್ದೆ. ಯೇಸು ಕ್ರಿಸ್ತರನ್ನು ರಕ್ಷಕರೆಂದು ನಂಬಬೇಕೆಂದು ನನಗೆ ಬೋಧಿಸಲಾಗಿತ್ತು, ಆದರೂ ಯೇಸು ನಿಜವಾಗಿಯೂ ಯಾರೆಂಬುದರ ಬಗ್ಗೆ ನನಗೆ ಏನೂ ತಿಳಿದಿರಲಿಲ್ಲ. ನನ್ನ ಬದುಕಿನಲ್ಲಿ ನನಗೆ ಶಕ್ತಿ ಇರಲಿಲ್ಲ, ಪಾಪ ಮಾಡದಿರಲು ಬಲ ಇರಲಿಲ್ಲ, ಮತ್ತು, ಹಿಂದೆ ತಿರುಗಿ ನೋಡಿದರೆ, ನಾನು ಎಂದಾದರೂ ಹೋಗಿದ್ದ ಯಾವುದೇ ಚರ್ಚ್ ನಿಜವಾಗಿಯೂ ಪಾಪ ಎಂದರೇನು ಎಂಬುದನ್ನು ನನಗೆ ಹೇಳಿಕೊಟ್ಟಿರಲೇ ಇಲ್ಲ. "ಆತ್ಮದಿಂದ ಪುನಃ ಹುಟ್ಟುವುದು" ಎಂಬುದನ್ನು ನಾನೆಂದೂ ಕೇಳಿರಲಿಲ್ಲ ಮತ್ತು ಅವುಗಳಲ್ಲಿ ಯಾವುದೇ ಚರ್ಚಿನಲ್ಲಿ ಆತ್ಮಗಳು ರಕ್ಷಣೆ ಹೊಂದುವ ಯಜ್ಞವೇದಿ ಕರೆಗೆ ನಾನೆಂದೂ ಸಾಕ್ಷಿಯಾಗಿರಲಿಲ್ಲ. ಅವು ನನ್ನಂತೆಯೇ ಆಧ್ಯಾತ್ಮಿಕವಾಗಿ ಸತ್ತಿದ್ದವು.

ನಮ್ಮ ಕುಟುಂಬವು ಯುನೈಟೆಡ್ ಸ್ಟೇಟ್ಸಿಗೆ ಹಿಂದಿರುಗಿದಾಗ ನಾನು ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿದ್ದೆನು. ನಾನು ಇನ್ನು ಆಧ್ಯಾತ್ಮಿಕವಾಗಿ ಸತ್ತಿರಲು ಸಿದ್ಧನಿರಲಿಲ್ಲ. ನನ್ನ ಸುತ್ತಮುತ್ತ ಜನರು "ಟ್ಯೂನ್ ಇನ್," "ಟರ್ನ್ ಆನ್," ಮತ್ತು "ಡ್ರಾಪ್ ಔಟ್" ಆಗುತ್ತಿದ್ದರು. ಬದುಕು, ಸಾವು, ನಿರಂತರತೆ, ಉದ್ದೇಶಗಳ ಬಗ್ಗೆ ನನ್ನೊಳಗಿದ್ದ ಪ್ರಶ್ನೆಗಳಿಗೆ ನಾನು ನಿಜವಾಗಿಯೂ ಉತ್ತರಗಳನ್ನು ಹುಡುಕಲು ಪ್ರಾರಂಭಿಸಿದೆ. ದೂರಪ್ರಾಚ್ಯದ ಧರ್ಮಗಳು, ಅನುಭಾವಿಗಳ ಧರ್ಮಗಳು, ಸ್ಥಳೀಯ ಅಮೇರಿಕನ್ ಇಂಡಿಯನ್ ಧರ್ಮಗಳು, ತತ್ವಶಾಸ್ತ್ರಗಳು, ಜನರ ವಿಚಾರಗಳು ಮತ್ತು ಆದರ್ಶಗಳ ಬಗ್ಗೆ ಪುಸ್ತಕಗಳು, ಸಮತಾವಾದ, ಸಮಾಜವಾದ, ಬಂಡವಾಳಶಾಹಿಗಳ ಮೇಲೆ ಪುಸ್ತಕಗಳು – ನಾನು ಆಲೋಚಿಸಬಲ್ಲ ಎಲ್ಲಾ ವಿಷಯಗಳ ಬಗ್ಗೆ ಪುಸ್ತಕಗಳನ್ನು ಓದಿದೆನು. ನಾನು ಬೈಬಲ್ ಅನ್ನು ಓದಿದೆನು, ಆದರೆ ಆ ಸಮಯದಲ್ಲಿ, ದೇವರ ಆತ್ಮ ನನ್ನೊಳಗಿಲ್ಲದೆ, ಅದನ್ನು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ನಾನು ದೇವರಿಗೆ ಸಮೀಪವಾಗಲು ಮಂತ್ರ ಪಠಣ, ಯೋಗ, ಹೂವುಗಳನ್ನು ತುಳಿಯದಂತೆ ಕಾಡುಗಳ ನಡುವೆ ನಡೆಯುವುದನ್ನು ಅಭ್ಯಾಸ ಮಾಡಿದೆನು. ನನ್ನೊಳಗಿದ್ದ ಶೂನ್ಯತೆಯನ್ನು ಯಾವುದೂ ತುಂಬುತ್ತಿರಲಿಲ್ಲ. ಯಾವುದೂ ಕೆಲಸ ಮಾಡುತ್ತಿರಲಿಲ್ಲ.

ನನಗೆ ಆಗ ತಿಳಿದಿರಲಿಲ್ಲ, ಆದರೆ ಈಗ ತಿಳಿದಿದೆ, ಇದು ಪ್ರಭುವು ನನ್ನೊಂದಿಗೆ ವ್ಯವಹರಿಸುತ್ತಿದ್ದುದು ಮತ್ತು ಆತನನ್ನು ಪ್ರಭುವನ್ನಾಗಿ ಮತ್ತು ರಕ್ಷಕರನ್ನಾಗಿ ಸ್ವೀಕರಿಸುವಂತೆ ನನ್ನ ಹಠಮಾರಿ ಅಹಂಕಾರವನ್ನು ಆತ ಭಂಗ ಮಾಡಲು ಸಾಧ್ಯವಾಗುವಂಥ ಜಾಗಕ್ಕೆ ನನ್ನನ್ನು ಕರೆತರುವುದಾಗಿತ್ತು. ಆತ ಇತರ ಎಲ್ಲಾ ಆಯ್ಕೆಗಳು ಇಲ್ಲವಾಗುವಂತೆ ಮಾಡಿದರು. ಆತ ನಿಮ್ಮೊಂದಿಗೆ ಈ ರೀತಿಯಲ್ಲಿ ಕೆಲಸ ಮಾಡಬೇಕಾಗಿಲ್ಲದಿರಬಹುದು, ಆದರೆ ಕೊನೆಗೂ ನನಗೆ ಜ್ಞಾನ ಬರಲು ಇದೊಂದೇ ಮಾರ್ಗ ಎಂದು ಆತನಿಗೆ ತಿಳಿದಿತ್ತು. ನನ್ನನ್ನು ಈ ಉದ್ದೇಶಕ್ಕೆ ಕರೆತರಲು ಆತ ನನ್ನನ್ನು ಕ್ಯಾಲಿಫೋರ್ನಿಯಾಗೆ ಬರಲು ಬಿಟ್ಟಿದ್ದರು. ಆತ ನನ್ನ ಮೇಲೆ ಕೆಲಸ ಮಾಡುತ್ತಿದ್ದರು, ಆದರೆ ನನಗೆ ಇನ್ನೂ ಅದು ತಿಳಿದಿರಲಿಲ್ಲ.

ಕ್ಯಾಲಿಫೋರ್ನಿಯಾದ ಹಾಲಿವುಡ್ ನಲ್ಲಿ, ನೀವು ಟೋನಿ ಆಂಡ್ ಸೂಸನ್ ಅಲಾಮೊ ಕ್ರಿಶ್ಚಿಯನ್ ಫೌಂಡೇಷನ್ ಸಾಕ್ಷಿಗಳನ್ನು ಎದುರಾಗದೆ ಹಾಲಿವುಡ್ ಬೂಲೆವಾರ್ಡ್ನಲ್ಲಿ 200 ಅಡಿ ನಡೆಯಲು ಸಾಧ್ಯವಿಲ್ಲ. ನೀವು ಹೋದಲ್ಲೆಲ್ಲಾ ಅವರಿದ್ದರು. ನಾನು ಕೆಲಸ ಹುಡುಕುತ್ತಾ ಅಥವಾ ಸುಮ್ಮನೆ ಸಮಯ ಕಳೆಯುತ್ತಾ ಹಾಲಿವುಡ್ ಗೆ ಹೋದಾಗಲೆಲ್ಲಾ ಅವರು ಸುವಾರ್ತಾ ಕರಪತ್ರಗಳನ್ನು ಹಂಚುತ್ತಾ ಮತ್ತು ತಮ್ಮ ಚರ್ಚ್ ನಲ್ಲಿ ಪ್ರಾರ್ಥನಾ ಸೇವೆಗಳಿಗೆ ಬರಲು ಜನರನ್ನು ಆಮಂತ್ರಿಸುತ್ತಾ ಎಲ್ಲೆಲ್ಲೂ ಇದ್ದರು. ಅವರು ದೇವರ ಶ್ರದ್ಧೆಯಿಂದ ತುಂಬಿದ್ದರು. ನನಗೆ









*ಅಲಾಮೊ ಮಿನಿಸ್ಟ್ರೀಯ ಸಹೋದರರು ಮತ್ತು ಸಹೋದರಿಯರು ಶುಶ್ರೂಷಾಗೃಹಗಳಲ್ಲಿ ಹಿರಿಯ ನಿವಾಸಿಗಳಿಗೆ ಸೇವೆ ಸಲ್ಲಿಸುತ್ತಿರುವುದು*

ಪ್ರಭುವಿನ ಬಗ್ಗೆ ಹಲವು ಬಾರಿ ಸಾಕ್ಷಿ ಹೇಳಲಾಗಿತ್ತು ಮತ್ತು ಇತರ ಅನೇಕರಂತೆ ಚರ್ಚಿಗೆ ಬರಲು ಕರೆಯಲಾಗಿತ್ತು, ಆದರೆ ಮೇಲಿಂದ ಮೇಲೆ ಅವರ ಕರೆಯನ್ನು ನಿರಾಕರಿಸಿದೆ. ಯೇಸುವಿನ ಬಗ್ಗೆ ಇತರರು ನನಗೆ ಹೇಳುವುದನ್ನು ಕೇಳಲು ಸಾಧ್ಯವಾಗದಷ್ಟು ನಾನಿನ್ನೂ ನನ್ನದೇ ವಿಚಾರಗಳಿಂದ ತುಂಬಿಹೋಗಿದ್ದೆ. ಆದರೂ, ಅನೇಕ ಬಾರಿ, ಪ್ರಶಾಂತವಾದ ರಾತ್ರಿ ವೇಳೆಯಲ್ಲಿ, ದಿನದ ಸಂಕ್ಷೋಭೆಗಳು ಅಂತ್ಯಗೊಂಡು ನಾನು ಏಕಾಂಗಿಯಾಗಿದ್ದಾಗ, ಈ ಕ್ರೈಸ್ತಮತೀಯರು ನನಗೆ ಹೇಳಿದ್ದ ವಿಷಯಗಳನ್ನು, ಅಂತ್ಯ ಕಾಲಗಳ ಬಗ್ಗೆ ಬೈಬಲ್ ನಲ್ಲಿರುವ ಗ್ರಂಥಗಳನ್ನು, ಸುತ್ತಮುತ್ತಲೂ ಸುಲಭವಾಗಿ ನೋಡಬಹುದಾದ ವಿಷಯಗಳನ್ನು, ನಿರಂತರ ಬದುಕು ಮತ್ತು ನರಕದ ಬಗ್ಗೆ ಗ್ರಂಥಗಳನ್ನು ಪ್ರಭುವು ನನಗೆ ಜ್ಞಾಪಕಕ್ಕೆ ತರುತ್ತಿದ್ದರು ಮತ್ತು ನಾನು ಆ ವಿಷಯಗಳ ಬಗ್ಗೆ ಆಲೋಚಿಸುವಂತಾಯಿತು. ಹೊರಗಡೆ, ಸೈತಾನನು ಇನ್ನೂ ನನ್ನನ್ನು ಸುತ್ತ ಎಳೆಯುತ್ತಿದ್ದನು, ಆದರೆ ಒಳಗಡೆ, ದೇವರು ನನ್ನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿದ್ದರು.

ಒಂದು ದಿನ ಮಧ್ಯಾಹ್ನ, ಘಟನೆಗಳ ಈ ಸರಣಿಯಲ್ಲಿ ದೇವರು ಆರಂಭಿಸಿದ್ದನ್ನು ಆತ ಮುಗಿಸಿದರು. ನನ್ನ ಬದುಕಿನಲ್ಲಿ ಏನೋ ನಡೆಯುತ್ತಿದೆ ಎಂದು ನನಗನಿಸಿತು, ಆದರೆ ಅದೇನೆಂದು ನನಗೆ ತಿಳಿದಿರಲಿಲ್ಲ. ಆ ದಿನ ನಾನು ಪುನಃ ನನ್ನನ್ನು ಹಾಲಿವುಡ್ ಬೂಲೆವಾರ್ಡ್ನಲ್ಲಿ ಕಂಡೆನು, ಚರ್ಚಿನಿಂದ ಸಹೋದರ ಸಹೋದರಿಯರನ್ನು ಹುಡುಕುತ್ತಾ ಅಲ್ಲವೇ ಅಲ್ಲ, ಅವರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಬದಲಿಗೆ ಒಂದು ಬೀದಿ ಮೂಲೆಯಲ್ಲಿ ಸಾಕ್ಷಿ ಹೇಳುತ್ತಿದ್ದ ಸಹೋದರಿಯರಲ್ಲಿ ಒಬ್ಬರು ನನಗೆ ಎದುರಾಗಿ ಆಕೆ ಕೇವಲ ನನಗೆ ಸುವಾರ್ತಾ ಕರಪತ್ರವನ್ನು ನೀಡಿ ಆ ಸಂಜೆ ಚರ್ಚ್ ಗೆ ಬರಲು ಹೇಳಿದರು. "ನಾನು ಅದರ ಬಗ್ಗೆ ಯೋಚಿಸುತ್ತೇನೆ" ಎಂದು ಆಕೆಗೆ ಒಂದು ಸುಳ್ಳು ನೆಪ ಹೇಳಿದೆ. ಆಕೆ, "ನಾನು ಅದರ ಬಗ್ಗೆ ನಿಜವಾಗಿಯೂ ಆಲೋಚಿಸುತ್ತಿದ್ದೆ, ಏಕೆಂದರೆ ಇದು ದೇವರು ನಿನ್ನ ನೆರವಿಗೆ ಬರಬಹುದಾದ ಕೊನೆಯ ಅವಕಾಶವಾಗಿರಬಹುದು!" ಎಂದು ಕೂಡಲೇ ಉತ್ತರಿಸಿದರು. ಆಕೆ ಹೇಳಬಹುದಾಗಿದ್ದ ಬೇರೆ ಯಾವ ಮಾತೂ ನನ್ನ ಮೇಲೆ ಇದಕ್ಕಿಂತ ಹೆಚ್ಚು ಪ್ರಭಾವ ಬೀರಿರಲಾರದು. ದೇವರು ನನ್ನನ್ನು ಇನ್ನು ಮೇಲೆ ತೊರೆಯುವರು ಎಂಬ ಆಲೋಚನೆಯೇ ನನ್ನ ಮುಖದ ಮೇಲೆ ಒಂದು ರಾಶಿ ಇಟ್ಟಿಗೆಗಳ ಪೆಟ್ಟಿಗಿಂತ ಹೆಚ್ಚಿನ ಹೊಡೆತವನ್ನು ನೀಡಿತು. ನಾನು ನಿಂತಲ್ಲೇ ಸ್ತಬ್ಧನಾದೆ. ನಾನು ಹುಚ್ಚನಾಗಿದ್ದೆ, ಆದರೆ ದೇವರು ನನ್ನನ್ನು ನನ್ನ ಪಾಡಿಗೆ ಬಿಡುವುದನ್ನು ನಾನೆಂದೂ ಬಯಸುವುದಿಲ್ಲ ಎಂದು ತಿಳಿಯದಷ್ಟು ಹುಚ್ಚನಾಗಿರಲಿಲ್ಲ. ಇದು ನನ್ನನ್ನು ಹೆದರಿಸಿತು. ನಾನು ಆಗಲೇ ದುಃಖದಲ್ಲಿದ್ದೆ.

ನಾನು ಹಾಲಿವುಡ್ ಬೂಲೆವಾರ್ಡ್ ಉದ್ದಕ್ಕೂ ನಡೆದು ಹಲವಾರು ದೊಡ್ಡ ಮನೆಗಳು ಮತ್ತು ದೊಡ್ಡ ತೋಟಗಳಿದ್ದ ಅಡ್ಡ ರಸ್ತೆಯೊಂದರಲ್ಲಿ ನಡೆದೆ. ಚರ್ಚ್ ಗೆ ಜನರನ್ನು ಕರೆದುಕೊಂಡು ಹೋಗುವ ಬಸ್ ಹೊರಡಲು ಇನ್ನೇನು ಹೊತ್ತಾಯಿತು ಎನ್ನುವವರೆಗೆ ಒಂದು ತೋಟದಲ್ಲಿ ಕಾದು ಕುಳಿತುಕೊಂಡೆ, ಮತ್ತು ನಂತರ ಬಸ್ ಜನರಿಂದ ತುಂಬುತ್ತಿದ್ದಲ್ಲಿಗೆ ನಡೆದು ಒಂದು ಆಸನ ತೆಗೆದುಕೊಂಡೆ.

ಸೌಗಸ್ಸಿನಲ್ಲಿದ್ದ ಚರ್ಚ್ ವರೆಗಿನ ಪ್ರಯಾಣವು ಸುಮಾರು ದೂರವಿತ್ತು, ಆದರೆ ನಾನು ನಿರಾತಂಕವಾಗಿದ್ದೆ. ಕ್ರೈಸ್ತಮತೀಯ ಸಹೋದರರಲ್ಲಿ ಒಬ್ಬರು ತಮ್ಮ ಗಿಟಾರ್ ತೆಗೆದು ದಾರಿಯುದ್ದಕ್ಕೂ ಸುವಾರ್ತಾ ಗೀತೆಗಳನ್ನು ಸಂಪೂರ್ಣ ಬಸ್ ನಲ್ಲಿದ್ದ ಜನರೊಂದಿಗೆ ಹಾಡಿದರು. ಆ ಸಮಯದಲ್ಲಿ ಇವೆಲ್ಲವೂ ನನಗೆ ವಿಚಿತ್ರವೆನಿಸಿದರೂ ನನಗೆ ಬಹಳ ಸಮಾಧಾನವೆನಿಸಿತು.

ನಾವು ಚರ್ಚ್ ತಲುಪಿದಾಗ, ಬಸ್ಸಿನಲ್ಲಿ ಬಂದಿದ್ದ ಎಲ್ಲ ಅತಿಥಿಗಳನ್ನು ಆರಾಧನೆಗಾಗಿ ಒಳಗೆ ಬಂದು ಕುಳಿತುಕೊಳ್ಳಲು ಆಹ್ವಾನಿಸಲಾಯಿತು. ಈ ಹಿಂದೆ ನಾನೆಂದೂ ಇಂತಹ ಚರ್ಚಿಗೆ, ಜೀವಂತವೆನಿಸಿದ ಚರ್ಚಿಗೆ, ಹೋಗಿರಲಿಲ್ಲ. ನಾನು ಹಿಂದೆ ಹೋಗುತ್ತಿದ್ದ ಚರ್ಚುಗಳಲ್ಲಿ ಇದ್ದಂತಹ ಆ ಸತ್ತು ಹೋದ ಅನುಭವ ಈ ಚರ್ಚಿನಲ್ಲಿ ಇರಲಿಲ್ಲ. ಈ ಆರಾಧನೆಯ ಸಮಯದಲ್ಲಿ ಈ ಸಹೋದರರು ಮತ್ತು ಸಹೋದರಿಯರು ಗಂಟಲು ಹರಿದು ಸುವಾರ್ತಾ ಗೀತೆಗಳನ್ನು ಹಾಡುತ್ತಿದ್ದರು. ಅವರು ತಮ್ಮ ಕೈಗಳನ್ನು ಎತ್ತಿ ಪ್ರಭುವನ್ನು ಹೊಗಳುತ್ತಿದ್ದರು. ದೇವರು ತಮ್ಮ ಬದುಕಿನಲ್ಲಿ ಏನು ಮಾಡಿದ್ದರು ಎಂಬುದಕ್ಕೆ ಆ ರಾತ್ರಿ ಚರ್ಚಿನಲ್ಲಿದ್ದ ಪ್ರತಿಯೊಬ್ಬರು ಒಂದಲ್ಲಾ ಒಂದು ರೀತಿಯ ಸಾಕ್ಷಿಯನ್ನು ಕೊಟ್ಟರು ಎಂದೆನಿಸುತ್ತಿತ್ತು. ಕೆಲವರು ನನ್ನ ಹಾಗೆ ಮಾದಕವಸ್ತುಗಳನ್ನು ತೆಗೆದುಕೊಂಡಿದ್ದರು, ಕೆಲವರು ತೆಗೆದುಕೊಂಡಿರಲಿಲ್ಲ. ಕೆಲವರು ಮಾಜಿ ಅಪರಾಧಿಗಳಾಗಿದ್ದರು; ಕೆಲವರು ಚರಂಡಿಗಳಿಂದ ಬಂದವರಾಗಿದ್ದರು ಮತ್ತು ಇತರರು ಸಮಾಜದ ಶ್ರೇಷ್ಠವಂಶದವರಾಗಿದ್ದರು. ಈ ಜನರು — ನಾನು ಆಗಲೂ ಇದ್ದಂತೆ — ದುಃಖದಲ್ಲಿದ್ದರು ಮತ್ತು ಕಳೆದುಹೋಗಿದ್ದರು. ಈಗ ಅವರೆಲ್ಲರೂ ಕ್ರಿಸ್ತರನ್ನು ತಮ್ಮ ರಕ್ಷಕರೆಂದು ಘೋಷಿಸಿದರು. ಅವರು ಈಗ ಕಳೆದುಹೋಗಿರಲಿಲ್ಲ, ಅವರಿಂದ ರಕ್ಷಣೆ ಹೊಂದಿದ್ದರು. ನನ್ನ ಆತ್ಮದಲ್ಲಿ, ಅವರು ಆ ರಾತ್ರಿ ಆರಾಧನೆಯಲ್ಲಿ ವ್ಯಕ್ತಪಡಿಸಿದ್ದು ನನಗೆ ಬೇಕಿತ್ತು. ನನಗೆ ಆ ಬದುಕು ಬೇಕಿತ್ತು, ಆದರೆ ಹಲವು ವಿಷಯಗಳ ಬಗ್ಗೆ ನಾನಿನ್ನೂ ಅನಿಶ್ಚಿತತೆಯಿಂದಿದ್ದೆ. ನಾನು ರಕ್ಷಣೆ ಹೊಂದದೆ ಇರುವಂತೆ ತನ್ನ ಕೊನೆಯ ಪ್ರಯತ್ನದಲ್ಲಿ ಸೈತಾನನು ನನ್ನತ್ತ ಲಕ್ಷಗಟ್ಟಲೆ ಸಂಶಯಗಳನ್ನು ಎಸೆಯುತ್ತಿದ್ದನು. "ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆಯನ್ನು ಹೊಂದುವಿ" ಎಂದು ಬೈಬಲ್ ಹೇಳುತ್ತದೆ. ಆ ರಾತ್ರಿ ಯಜ್ಞವೇದಿಯ ಕರೆಯ ಆಮಂತ್ರಣದಲ್ಲಿ, ಸೈತಾನನು ನನ್ನ ಮೇಲೆ ತನ್ನ ಹಿಡಿತವನ್ನು ಕಳೆದುಕೊಂಡನು. ಆ ರಾತ್ರಿ ಆ ಸಭೆಯ ಎದುರು ನನ್ನ ಮೊಣಕಾಲೂರಿ ನಾನು ಕರ್ತನಾದ ಯೇಸು ಕ್ರಿಸ್ತರ ಮೇಲೆ ನಂಬಿಕೆಯಿಟ್ಟೆನು ಮತ್ತು ನಾನು ರಕ್ಷಣೆ ಹೊಂದಿದೆನು! ದೇವರನ್ನು ಸ್ತುತಿಸಿ! ಆತನ ಸಮಾಧಾನ ಮತ್ತು ನನ್ನ ಮೇಲೆ ಆತನ ಕರುಣೆಗಾಗಿ ಪ್ರಭುವನ್ನು ನಿರಂತರವಾಗಿ ಸ್ತುತಿಸಿ! ನಾನು ಪುನಃ ಹುಟ್ಟಿದೆನು!

ಆ ರಾತ್ರಿ ಪ್ರಭು ನನ್ನ ಹೃದಯವನ್ನು ಪ್ರವೇಶಿಸುವ ಅನುಭವ ನನಗಾಯಿತು ಮತ್ತು ನಾನು ಅವನನ್ನು ಎಂದೂ ತೊರೆಯುವುದಿಲ್ಲ. ಆರಾಧನೆಯ ನಂತರ ಪ್ರಾರ್ಥನಾ ಕೊಠಡಿಗೆ ಹೋಗುತ್ತಿರುವಾಗ, ನನ್ನನ್ನು ನೋಡಿಕೊಳ್ಳುವ ಮತ್ತು ನನ್ನ ಪ್ರಾರ್ಥನೆಗೆ ಉತ್ತರಿಸುವ ಒಬ್ಬ ದೇವರು ನಿಜವಾಗಿಯೂ ಪರಲೋಕದಲ್ಲಿದ್ದಾರೆ ಎಂದು ದೃಢತೆಯಿಂದ ತಿಳಿದುಕೊಂಡಿದ್ದು ನನಗೆ ಆದ ಅತ್ಯಂತ ಸಮಾಧಾನಕಾರಿ ಅನುಭವವಾಗಿತ್ತು. ಕ್ರಿಸ್ತರು ಇದಕ್ಕಾಗಿ ತನ್ನ ಸ್ವಂತ ರಕ್ತದಿಂದ ಬೆಲೆ ತೆತ್ತರು. ನಾವು ಜೀವಿಸುವಂತೆ ಆತ ಸತ್ತರು. ಆ ರಾತ್ರಿ ಆತ ನಾನೆಂದೂ ಮರೆಯಲಾಗದಂತಹ ಸ್ಥಳಕ್ಕೆ ನನ್ನನ್ನು ಕರೆತಂದರು. ಇದಾದ ಸುಮಾರು ಎರಡು ವಾರಗಳ ನಂತರ ಆತ ನನಗೆ ಪವಿತ್ರಾತ್ಮದ ಪವಿತ್ರಸ್ನಾನವನ್ನು ನೀಡಿದರು. ಈ ಅನುಭವಗಳ ನಂತರ, ದೇವರು ನಿಜವಲ್ಲ ಎಂದು ಯಾವುದೂ ನನಗೆಂದೂ ಮನವೊಲಿಸಲು ಸಾಧ್ಯವಿರಲಿಲ್ಲ. ಆತ ಜೀವಂತವಾಗಿದ್ದಾರೆ, ಮತ್ತು ಆತ ಶಾಶ್ವತವಾಗಿ ಜೀವಂತವಾಗಿದ್ದಾರೆ. ಆತ ನನ್ನನ್ನು ರಕ್ಷಿಸಿದರು ಮತ್ತು ಆತ ನಿಮ್ಮನ್ನು ರಕ್ಷಿಸಬಹುದು. ಅಂದಿನಿಂದ ಈ ಮಿನಿಸ್ಟ್ರಿಯ ಮೂಲಕ ಸಹಸ್ರಾರು ಜನರನ್ನು ಕ್ರಿಸ್ತರ ಬಳಿ ಕರೆತರುವುದನ್ನು ನಾನು ನೋಡಿದ್ದೇನೆ. ಅವರಿಗೆ ಇದ್ದ ರೋಗಗಳು ಮತ್ತು ಕಾಯಿಲೆಗಳಿಂದ ಅನೇಕಾನೇಕ ಜನರು ದೇವರ ಶಕ್ತಿಯಿಂದ ಗುಣಮುಖರಾಗುವುದನ್ನು ನಾನು ನೋಡಿದ್ದೇನೆ. ಚೂರುಚೂರಾಗಿ ಹೋಗಿದ್ದ ಬದುಕುಗಳು (ನನ್ನಂಥವು) ಫಲದಾಯಕ ಬದುಕುಗಳಾಗಿ ಪರಿವರ್ತನೆಗೊಳ್ಳುವುದನ್ನು ನಾನು ನೋಡಿದ್ದೇನೆ. ಈ ಲೋಕವು ನೀಡಬಹುದಾದ ಯಾವುದರೊಂದಿಗೂ ನಾನು ಈ ಕ್ರೈಸ್ತಮತೀಯ ಬದುಕನ್ನು ಅದಲುಬದಲು ಮಾಡುವುದಿಲ್ಲ.

ಕ್ರಿಸ್ತರಲ್ಲಿ ಹೊಸ ಬದುಕನ್ನು ಕಾಣಲು ಬದುಕಿನ ಎಲ್ಲಾ ಮಾರ್ಗಗಳಿಂದ ಸಹಸ್ರಗಟ್ಟಲೆ ಜನರನ್ನು ತರಲು ದೇವರು ಬಳಸಿದ ಜನರೇ ಟೋನಿ ಮತ್ತು ಸೂಸನ್ ಅಲಾಮೊ. ಅವರಿಬ್ಬರೂ ಇದನ್ನು ಬಹಳ ನಿಃಸ್ವಾರ್ಥವಾಗಿ ಮಾಡಿದರು. ಅವರು ಬದಲಿಯಾಗಿ ಯಾರಿಂದಲೂ ಏನನ್ನೂ ಕೇಳಲಿಲ್ಲ, ನಾವು ಪ್ರಭುವಿನ ಸೇವೆ ಮಾಡಬೇಕೆಂಬುದನ್ನು ಮಾತ್ರ ಕೇಳಿಕೊಂಡರು. 1982 ರಲ್ಲಿ ಸೂಸನ್ ದೇವರೊಂದಿಗೆ ಇರಲು ಹೊರಟುಹೋದರು ಮತ್ತು ಆಗಿನಿಂದ ಟೋನಿ ಸುವಾರ್ತೆಯಲ್ಲಿ ಮುಂದುವರಿದಿದ್ದಾರೆ. ಅವರು ಇನ್ನೂ ಮುಂದುವರಿಯುತ್ತಿದ್ದಾರೆ. ನೆರವಿನ ಅಗತ್ಯವಿರುವ ಇತರರನ್ನು ತಲುಪಲು ಸಾಕ್ಷಿಯಾದವರನ್ನು ಪ್ರತಿನಿತ್ಯ ರಸ್ತೆಯಲ್ಲಿ ತಿರುಗುವಂತೆ ಪ್ರೇರೇಪಿಸುವಂತೆ ಮಾಡಲು ಅವರಲ್ಲಿ ದೇವರ ಶ್ರದ್ಧೆ ಇರುವುದಕ್ಕಾಗಿ ಮಾತ್ರವಲ್ಲ, ಈ ದುಷ್ಟ ಜಗತ್ತಿನ ವ್ಯವಹಾರಗಳಲ್ಲಿ ಸಿಕ್ಕಿಹಾಕಿಕೊಳ್ಳದೆ ಪವಿತ್ರವಾದ ಮತ್ತು ಧಾರ್ಮಿಕವಾದ ಬದುಕನ್ನು ನನ್ನಂತಹ ಜನರು ಬದುಕಲು ಸಾಧ್ಯವಾಗುವಂಥ ಸ್ಥಳಗಳನ್ನು ಒದಗಿಸುವುದಕ್ಕಾಗಿ ಕೂಡ ನಾನು, ಮತ್ತು ಇತರ ಅನೇಕರು, ಅವರಿಬ್ಬರಿಗೂ ಬಹಳ ಕೃತಜ್ಞರು. ಪ್ರಭುವನ್ನು ಸ್ತುತಿಸಿ!

ನೀವು ಈ ಸಾಕ್ಷಿಯನ್ನು ಓದುತ್ತಿದ್ದರೆ ಮತ್ತು ಇನ್ನೂ ರಕ್ಷಣೆ ಹೊಂದಿರದಿದ್ದರೆ, ಕಾಯಬೇಡಿ. ಯೇಸು ಕ್ರಿಸ್ತರು ನಿಜವಾಗಿಯೂ ಜಗತ್ತಿನ ರಕ್ಷಕರು, ಮತ್ತು ನೀವು ಬಯಸುವುದನ್ನೆಲ್ಲ ಆತ ನೀಡಬಲ್ಲರು. ಆತ ನನ್ನನ್ನು ರಕ್ಷಿಸಿದರು, ಕೂಗಾಡಲು, ಬದುಕಿಗಾಗಿ ಸಾವಿಗಾಗಿ ಒಂದು ವಿಷಯವನ್ನು ಆತ ನನಗೆ ಕೊಟ್ಟರು. ಆತ ನಿಮಗಾಗಿ ಕೂಡ ಅದನ್ನೆ ಮಾಡಬಲ್ಲರು. ಕಾಯಬೇಡಿ. ಇಂದೇ ಆತನನ್ನು ನಿಮ್ಮ ಹೃದಯದೊಳಗೆ ಆಮಂತ್ರಿಸಿ!

ಪ್ರಭುವನ್ನು ಸ್ತುತಿಸಿ,
ಸ್ಟೀವೆನ್ ವೆಡೆಲ್

# ದೇವರ ಸೈನ್ಯ ಮತ್ತು ವಾಯುಪಡೆ

**(ವೀಕ್ಷಕರು)**

*(ಪುಟ 5 ರಿಂದ ಮುಂದುವರಿದಿದೆ)*

ಅಧ್ಯಯನ ಮಾಡಿ ಮತ್ತು ಆಜ್ಞೆಗಳನ್ನು ಪಾಲಿಸಿ.[14] ದೇವರ ಆತ್ಮದಲ್ಲಿ ನಡೆಯಿರಿ.[15]

ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[16] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[17] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[18] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[19] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[20] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[21] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[22] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು, ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[23] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[24] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[25] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಮತ್ತು ಇನ್ನು ಮೇಲೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[26]

ಈಗ ನೀವು ರಕ್ಷಣೆ ಹೊಂದಿದ್ದರಿಂದ ನಿಮ್ಮ ಪೂರ್ಣ ಹೃದಯದಿಂದಲೂ, ಆತ್ಮದಿಂದಲೂ, ಮನಸ್ಸಿನಿಂದಲೂ ಮತ್ತು ಶಕ್ತಿಯಿಂದಲೂ ದೇವರಿಗೆ ಸೇವೆ ಮಾಡಿರಿ.[27] ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರು.[28] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು' [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನೀವು ಈ ಗ್ರಹವನ್ನು ಬಿಟ್ಟುಹೋಗುವ ತನಕ ಅದು ಹೇಳಿದ್ದನ್ನು ಮಾಡಿ.[29]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ. ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ನಾವು ಪಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಅನೇಕ ಭಾಷೆಗಳಲ್ಲಿ ಮುದ್ರಿಸುತ್ತೇವೆ, ಮತ್ತು ಪ್ರಪಂಚದೆಲ್ಲೆಡೆ ಕಳುಹಿಸುತ್ತೇವೆ. ನಾವು ಮುದ್ರಣ ಕಾಗದ ಮತ್ತು ಶಿಪ್ಪಿಂಗಿಗಾಗಿ ಅನೇಕ ಮಿಲಿಯ ಡಾಲರುಗಳನ್ನು ವ್ಯಯಿಸುತ್ತೇವೆ, ಹಾಗಾಗಿ ನಮಗೆ ನಿಮ್ಮ ಪ್ರಾರ್ಥನೆ ಮತ್ತು ಆರ್ಥಿಕ ಸಹಾಯದ ಅಗತ್ಯವಿದೆ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ... ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೇವೆ ಎಂದು ಕೇಳುತ್ತೀರೋ? ದಶಮಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಮಾಂಶವನ್ನು [ದಶಮಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವುದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**14** 2 ತಿಮೊಥೆಯನಿಗೆ 2:15, 3:14-17 **15** ಯೆಹೆಜ್ಕೇಲನು 36:27, ರೋಮಾಪುರದವರಿಗೆ 8:1-14, ಗಲಾತ್ಯದವರಿಗೆ 5:16-25 **16** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **17** ಮತ್ತಾಯ 26:63-64, 27:54, ಲೂಕ 1:30-33, ಯೋಹಾನನು 9:35-37, ರೋಮಾಪುರದವರಿಗೆ 1:3-4 **18** ಅಪೊಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನನು 1:7, Rev. 5:9 **19** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನನು 2:19, 21, 10:17-18, 11:25, ಅಪೊಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **20** ಲೂಕ 22:69, ಅಪೊಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **21** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **22** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನನು 1:7, ಪ್ರಕಟನೆ 1:5, 7:14 **23** ಮತ್ತಾಯ 26:28, ಅಪೊಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ1:7, ಕೊಲೊಸ್ಸೆಯವರಿಗೆ 1:14 **24** ಮತ್ತಾಯ 21:22, ಯೋಹಾನನು 6:35, 37-40, ರೋಮಾಪುರದವರಿಗೆ 10:13 **25** ಇಬ್ರಿಯರಿಗೆ 11:6 **26** ಯೋಹಾನನು 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **27** ಧರ್ಮೋಪದೇಶಕಾಂಡ 4:29, 6:5, 10:12, 11:13, 13:3-4, 26:16, 30:6, ಯೆಹೋಶುವನು 22:5, ಮತ್ತಾಯ 22:37-40, ಮಾರ್ಕ 12:29-31, ಲೂಕ 10:27 **28** ಮತ್ತಾಯ 28:18-20, ಯೋಹಾನನು 3:5, ಅಪೊಸ್ತಲರ ಕೃತ್ಯಗಳು 2:38, 19:3-5 **29** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವನು 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

---

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**

***24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: (661) 252-5686 • Fax (661) 252-4362***

**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿ ರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ಆರಾಧನೆಗಳನ್ನು ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ರಾತ್ರಿ 8 ಗಂಟೆಗೆ ಮತ್ತು ಇತರ ತಾಣಗಳಲ್ಲಿ ಪ್ರತಿ ರಾತ್ರಿ ನಡೆಸಲಾಗುತ್ತದೆ.

ಮಾಹಿತಿಗಾಗಿ ದಯವಿಟ್ಟು (908) 937-5723 ಗೆ ಕರೆ ಮಾಡಿ. ಪ್ರತಿ ಆರಾಧನೆಯ ನಂತರ ಊಟೋಪಚಾರವಿರುತ್ತದೆ.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದ ವಿತರಕರಾಗುವ ಮೂಲಕ ಆತ್ಮಗಳ ಕೊಯ್ಲಿನಲ್ಲಿ ಶ್ರಮಜೀವಿಯಾಗಿರಿ.*

*ನಮ್ಮ ಎಲ್ಲಾ ಸಾಹಿತ್ಯ ಮತ್ತು ಆಡಿಯೊ ಸಂದೇಶಗಳು, ಷಿಪಿಂಗ್ ಸೇರಿದಂತೆ ಶುಲ್ಕರಹಿತವಾಗಿವೆ. ಅವುಗಳಿಗಾಗಿ ನಿಮ್ಮಿಂದ ಯಾರಾದರೂ ಶುಲ್ಕ ಪಡೆಯಲು ಪ್ರಯತ್ನಿಸುತ್ತಿದ್ದರೆ, ದಯವಿಟ್ಟು (661) 252-5686 ಗೆ ಕಲೆಕ್ಟ್ ಕರೆ ಮಾಡಿ.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೊಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright February 2013 All rights reserved World Pastor Tony Alamo ®Registered February 2013

KANNADA—Vol. 17400—*The Army and Air Force of God.*